

ಶಿವರಾಮ ಕಾರಂತ ನಿರ್ದೇಶಿತ ನೃತ್ಯನಾಟಕ ಮೇಳದಲ್ಲಿ
ಹಾಡುವ ಯಕ್ಷಗಾನ ಪ್ರಸಂಗಗಳು

ಭೀಷ್ಮ ವಿಜಯ
ನಳ-ದಮಯಂತಿ
ಕನಕಾಂಗಿ

ಯಕ್ಷಗಾನ ಕೇಂದ್ರ, ಉಡುಪಿ 576 102

...ಷ್ಮವಿಜಯ

:

...ಸಳ್ಳಿ ನರಸಿಂಹಶಾಸ್ತ್ರಿ

ಸಂಪಾದಕ :

ಭಾಗವತ ನೀಲಾವರ ರಾಮಕೃಷ್ಣಯ್ಯ

ಯಕ್ಷಗಾನ ಕೇಂದ್ರ, ಉಡುಪಿ – 576102

ಭೀಷ್ಮವಿಜಯ

ರಾಗ – ನಾಟಿ – ಆದಿತಾಳ

ಪ್ರಾರ್ಥನೆ : ನೆನೆಯಿರೊ ಜನರೆಲ್ಲ ಗಜಮುಖನ ।
ಗುಣಮಣಿ ಮದಪೂರ ಗಣನಾಥನ ॥
ಲಂಬೋದರನ ಗಜಾನನನ ವಿನಾಯಕನ ॥
ದೇವರದೇವ ಕೃಪಾಕರನ ।
ಪಾವನಚರಿತ ಪುಣ್ಯೋದಯನ ।
ಭಾವಜ ವಿಷಯಕ್ಕೆ ಸಿಲುಕದನ ।
ಕೋವಿದ ಗಿರಿಜೆಗೆ ವರಸುತನ ।
ಲಂಬೋದರನ ಗಜಾನನನ ವಿನಾಯಕನ ।
ನೆನೆಯಿರೊ ಜನರೆಲ್ಲ ಗುಣಯುತನ ॥

(ಕಾಶಿರಾಜನು ಪುತ್ರಿಯರಿಗೆ ಸ್ಪರ್ಧೆಯ ಪರಿಣಯವನ್ನು ನಿಶ್ಚೈಸಿ
ಚಾರಕರ ಮೂಲಕ ಕೆಲ ರಾಜರಿಗೆ ಆಮಂತ್ರಣ ಕಳಿಸುತ್ತಾನೆ.)
ಕಳಿಂಗಾಧಿಪತಿ ದೃಢಸೇನ ಒಡ್ಡೋಲಗದಲ್ಲಿರುವಾಗ
[ಚಾರಕನ ಪ್ರವೇಶ]

ರಾಗ – ಕಲ್ಯಾಣಿ – ಅಷ್ಟತಾಳ

ಚಾರಕ : ಕೇಳು ದೃಢಸೇನರಾಯ । ಕಾಶೀಶ ತಾ ।
ಪೇಳಿದ ಬಗೆಯ ಜೀಯ ॥

ಭೂಲಲಾಮರನೆಲ್ಲ ಕರೆಸಿ ಸಭೆಯ ಗೈದು ।
ನಾಳೆ ಬರುವ ಚೈತ್ರದಾ । ಪಂಚಮಿದಿನ ॥
ಧರಣಿಪಾಲಕರೊಳಗೆ । ಸರ್ವರ ಗೆದ್ದ ।
ಧುರಧೀರ ವಿಕ್ರಮಗೇ ।
ತರಳೆಯರಂಬೆ ಅಂಬಿಕೆ ಅಂಬಾಲೆಯರ ।
ಹರುಷದಿ ಕೊಡುವೆನೆಂದು ।
ನುಡಿದಿಹನಿಂದು ॥

ರಾಗ – ಅಠಾಣ – ಝಂಪೆತಾಳ

ದೃಢಸೇನ : ಚರನೆಂದ ನುಡಿಯ ಕೇಳಿ । ಕಾಳಿಂಗ ।
ನುರುತರಾನಂದತಾಳಿ ॥
ಪರಿಪರಿಯಿಂ ಮನ್ನಿಸುತ್ತ । ಚಾರಕನ ।
ಬರುವೆನೀಕ್ಷಣವೆನ್ನುತ ॥

[ನಿರ್ಗಮನ]

ಸಾಲ್ವನ ಒಡ್ಡೋಲಗ
[ಚಾರಕನ ಪ್ರವೇಶ]

ರಾಗ – ಹಂಸಧ್ವನಿ – ರೂಪಕತಾಳ

ಚಾರಕ : ಧರಣೇಂದ್ರ ಪ್ರತಾಪಸೇನನೆಂಬವನಿಂಗೆ ।
ಪರಮ ಸುಂದರ ರೂಪಾನ್ವಿತರು ॥
ತರಳೆಯರಂಬೆ ಅಂಬಿಕೆ ಅಂಬಾಲಿಕೆಯರು ।
ಸುರಸುಂದರ ಕುವರಿಯರು ॥
ಧುರದೊಳು ಸಕಲ ರಾಯರ ಗೆದ್ದ ಶೂರಂಗೆ ।
ಪರಿಣಯಗೈವೆನೆಂದಿಹನು ॥

ರಾಗ – ಘಂಟಾರವ – ಅಷ್ಟತಾಳ

ಸಾಲ್ವ : ದೂತನೆಂದುದ ಕೇಳುತ್ತ ಸಾಲ್ವವ ।
ನೀಶನು ಘರ್ಜಿಸುತ ॥
ಪೂತುರೆ ಸಕಲ ರಾಯರ ಕರೆಸುತ ಕಾಶಿ ।
ನಾಥನು ಮರೆತನೇ ನನ್ನ ॥

(ಇಬ್ಬರೂ ನಿರ್ಗಮಿಸುತ್ತಾರೆ. ಇತ್ತ ಭೀಷ್ಮನ ಒಡ್ಡೋಲಗ)
(ಭೀಷ್ಮನ ಗುಪ್ತಚರ ಬಂದು ವಂದಿಸುತ್ತಾನೆ)

ರಾಗ – ಮುಖಾರಿ – ಆದಿತಾಳ

ಗುಪ್ತಚರ : ಸುರನದೀಜಾತ ಲಾಲಿಸಯ್ಯ ।
ನಾ ಪೇಳುವ ನುಡಿಯ ॥
ಧರಣೀಪಾಲರ ಪಟ್ಟಣದೊಳಗೆ ।
ಚರಿಸುವ ಗುಪ್ತಚರರು ನಾವು ।
ಹರಿತರೆ ಕಾಶಿಪುರದಲಿ ಕೇಳ್ದೆವು ।
ಸರಸರದ ಸುದ್ದಿಯ ಲಾಲಿಸು ಜೀಯ ॥
ತರಳೆಯರಿಹರು ಮೂವರು ದೊರೆಗೆ ।
ವರರನು ಆರಿಸೆ ನೆರೆಸಿಹ ಪಂದ್ಯವ ।
ಕರೆಸದೆ ನಿಮ್ಮನು ಮಾಡುವ ಸ್ಪರ್ಧೆಯು ॥
ಹಿರಿಯುಪಮಾನವು ಸಹಿಸುವಿರೇನು ॥

ರಾಗ – ನಾಟಿ – ಝಂಪೆತಾಳ

ಭೀಷ್ಮ : ಇಳೆಯೊಳ್ ವಿಕ್ರಮಿಗಳೊಳಗಾರೆಂದು ಕಾಶಿಪತಿ ।
ತಿಳಿದಿರುವನೀಗ ಕಡು ಮೂರ್ಖ ॥

ಕಲಿಗಳಾಗಿಹ ಚಕ್ರವರ್ತಿಗಳು ಸಾವಿರಲು ।
ಛಲವಿಲ್ಲವೆಂಬನೇ ನಮಗೆ ॥

[ನಿರ್ಗಮನ]

(ಅಂಬೆ ಅಂಬಿಕೆ ಅಂಬಾಲೆಯರ ಜಲಕ್ರೀಡೆ)

ರಾಗ – ಮೋಹನಕಲ್ಯಾಣಿ – ಆದಿತಾಳ

ಅಂಗನೆಯರು ಕೂಡಿ ಆಡೆ ಬಂದರು ॥
ಗಂಗೆಯೊಳಗೆ ಕ್ರೀಡೆ ಆಡೆ ನಿಂದರು ॥

(ಜಲಕ್ರೀಡೆ ಮುಗಿಸಿ ಅಂಬೆ ಒಬ್ಬಳೇ ಇದ್ದಲ್ಲಿ ಸಾಲ್ವನ ಪ್ರವೇಶ)

ರಾಗ – ಕೇದಾರಗೌಳ – ಅಷ್ಟತಾಳ

ಸಾಲ್ವ : ಪರಮ ಸುಂದರಿ ಕೇಳ್ ನೀನ್ಯಾರೆ ನಿನ್ನನು ಪೆತ್ತ ।
ದೊರೆ ಯಾರು ಪೇಳು ಪೇಳೆ ॥
ಸ್ಮರನಾಣೆ ನಿನ್ನ ಕಂಡು ಬೆರಗಾದೆ ಮೋಹನ್ನೆ ।
ನಿರುಕಿಸೀ ಸಾಲ್ವನನು ॥

ರಾಗ – ಧನ್ಯಾಶ್ರೀ – ಅಷ್ಟತಾಳ

ಅಂಬೆ: ಧರಣಿಪಾತ್ಮಜೆ ದನುಜೇಂದ್ರನ ಕಾಣುತ್ತ ।
ಸ್ಮರಹತಿಯೊಳು ಬಳಲಿ ॥
ಶಿರವ ತಗ್ಗಿಸಿ ಕಾಶಿಪತಿಯ ಕುವರಿ ಎನ್ನ ।
ಕರೆವರು ಅಂಬೆಯೆಂದು ॥

ಪರಮ ವಿಕ್ರಮದೊಳು ಸಕಲರ ಗೆಲಿದರ್ಗೆ ।
ಒಲಿದೀವೆನೆಂದೆನುತ ।
ಧರಣಿಪಾಲಕರನ್ನು ಕರೆಸಿಹ ಮತ್ಪಿತ ।
ಕರುಣದಿ ಲಾಲಿಸಯ್ಯ ॥

ರಾಗ – ಕೇದಾರಗೌಳ – ಅಷ್ಟತಾಳ

ಸಾಲ್ವ : ಧಾರುಣೀಶರು ಬಂದರೊಳ್ಳಿತು ಮನ್ಮನ ।
ಸೂರೆಯಾದುದು ಕೇಳೆಲೆ ॥
ನಾರಿ ಸ್ವಯಂವರಕೊಪ್ಪದೆನ್ನನು ಸೇರೆ ।
ಭೂರಿತೋಷವಗೊಳಿಪೆ ॥

ರಾಗ – ಧನ್ಯಾಸಿ – ಅಷ್ಟತಾಳ

ಅಂಬೆ : ಕೇಳಯ್ಯ ಸಾಲ್ವಭೂನಾಥ ಎನ್ನಯ ಪಿತ ।
ನಾಳೆ ಎನ್ನನುಜೆಯರ ॥
ಭೂಲಲಾಮರಿಗ್ಯಾರಿಗಿತ್ತರು ಈಯಲಿ ।
ಲೋಲ ನಿನ್ನನು ವರಿಪೆ ॥
[ನಿರ್ಗಮನ]

(ಕಾಶೀರಾಜನ ಸ್ವಯಂವರಮಂಟಪದಲ್ಲಿ)

ರಾಗ – ಆರಭಿ – ತ್ರಿಪುಟತಾಳ

ಕಾಶಿರಾಜ : ಪರಮ ದೈನ್ಯದೊಳಿದಿರುಗೊಳ್ಳುತ ।
ಕರೆದುತಂದಾಸನವನೀಯುತ ।
ಪರಮತೋಷದಿ ಕೇಳ್ದ ಕುಶಲವ ಧನ್ಯ ತಾನೆಂದ ॥

(ದೃಢಸೇನ, ಸಾಲ್ವ, ಭೀಷ್ಮರನ್ನು ಸಂಬೋಧಿಸಿ ಕಾಶಿರಾಜ)

ರಾಗ – ಬಿಲಹರಿ – ಅಷ್ಟತಾಳ

ಕಾಶಿರಾಜ : ಪೃಥ್ವಿಪಾಲರೆ ಕೇಳಿರೀಗ । ಮನ ।
ದರ್ಶಿಯನುಸುರುವೆ ಬೇಗ ॥
ಸತ್ವಪರಾಕ್ರಮ ತೋರಿ ಗೆದ್ದವರಿಗೆ ।
ಪುತ್ರಿಯರನು ಬಲು ತೋಷದೊಳೀವೆನು ॥

ರಾಗ – ಘಂಟಾರವ – ಅಷ್ಟತಾಳ

ದೃಢಸೇನ : ಧರಣಿಪಾಲನ ನುಡಿ ಕೇಳಿ ದೃಢಸೇನ ।
ಕರದಿ ಧನು ಝೇಂಕರಿಸಿ ಸಾಹಸ ಧುರಪರಾಕ್ರಮಿ ಭಾಪುರೇ ॥
ಷಂಡರಂದದಿ ಕುಳಿತಿಹಿರೇತಕೆ ।
ಗಂಡುಗಲಿಯಾದವರು ಸಮರಪ್ರಚಂಡತನವನು ತೋರಿರೈ ॥

ರಾಗ – ಪಂಚಾಗತಿ – ರೂಪಕತಾಳ

ಸಾಲ್ವ : ದುರುಳ ಕಾಳಿಂಗ ನಿನ್ನ ಪರಮ ಶೌರ್ಯ ತೋರೆನುತ್ತ ।
ಗುರಿಯೊಳೊಂದು ಶರವನೆಚ್ಚ ಸಾಲ್ವಭೂಪನು ॥
(ಸಾಲ್ವ ದೃಢಸೇನ ಯುದ್ಧ – ದೃಢಸೇನನ ಸೋಲು)

ರಾಗ – ಘಂಟಾರವ – ಅಷ್ಟತಾಳ

ಭೀಷ್ಮ : ಕಿಡಿಗೆದರುತ ಭೀಷ್ಮನು । ಸಾಲ್ವನ ಕಂಡು ।
ಘುಡುಘುಡಿಸುತಲೆಂದನು ।
ಧಡಿಗ ಖಳಾಧಮ ತೊಡು ತೊಡು ಅಸ್ತ್ರವ ।
ಒಡನೆ ತೋರುವೆ ಶೌರ್ಯವ ॥

(ಭೀಷ್ಮ ಸಾಲ್ವರ ಯುದ್ಧ)
(ಸಾಲ್ವನು ಸೋತು ನಿರ್ಗಮಿಸುವನು)

ರಾಗ – ಕಾನಡ – ಝಂಪೆತಾಳ

ಕಾಶಿರಾಜ : ಕನ್ನೆಯರ ಕೈಪಿಡಿದು
ಎನ್ನ ಕುಲಕೋಟಿಗಳು
ಧನ್ಯರಾಗುವ ತೆರನ ಗೈಯುವುದು ನೀವು ॥
(ಪುತ್ರಿಯರನ್ನು ಭೀಷ್ಮನಿಗೊಪ್ಪಿಸುವನು)
(ಭೀಷ್ಮನು ಅರಮನೆಗೆ ಬರುವನು)

ರಾಗ – ಬಿಲಹರಿ – ಅಷ್ಟತಾಳ

ಭೀಷ್ಮ : ಸರಸಿಜಾಂಬಕಿಯರೆ ಕೇಳಿ । ಶಶಿ ।
ಪರಂಪರೆಯೊಳು ರಾಜ್ಯವಾಳಿ ॥
ಹಿರಿಯರೇರಿದ ಸಿಂಹವಿಷ್ಟರದೊಳಗೆನ್ನ ।
ಕಿರಿಯ ವಿಚಿತ್ರವೀರ್ಯಕನೇರಿ ಆಳುವ ॥
ಕುರುಧರೆಯನು ಪಾಲಿಸುವನು । ಸಾಧು ।
ಪರಮ ಸದ್ಗುಣರೂಪಾನ್ವಿತನು ॥
ಹರುಷದೊಳಾತನ ವರಿಸಿ ಮೂವರು ಎಮಗೆ ।
ಗುರುತರಾನಂದವ ಗೈಯಲೋಸುಗ ತಂದೆ ॥
(ಅಂಬಿಕೆ, ಅಂಬಾಲೆಯರನ್ನು ವಿಚಿತ್ರವೀರ್ಯನಿಗೊಪ್ಪಿಸುವನು)
(ಅಂಬೆ ಮಾತ್ರ ಒಪ್ಪದೆ ಭೀಷ್ಮನೊಡನೆ ಹೀಗೆ ಹೇಳುವಳು)

ರಾಗ – ಪೂರ್ವಿಕಲ್ಯಾಣಿ – ಅಷ್ಟತಾಳ

ಅಂಬೆ : ಕೇಳು ಭೀಷ್ಮಾಚಾರ್ಯ ಬಿನ್ನಪವ ।
ಸತ್ಕೀರ್ತಿ ಸದ್ಗುಣಶೀಲ ಪೇಳುವೆ

ನೆನ್ನ ಮನದೊಲವ ॥
ಭೂಲಲಾಮರ ಜೈಸಿ ಮೆರೆದಿಹ ।
ತೋಳಿನೊಳು ಬಿಗಿದಪ್ಪಿ ಮನ್ಮಥ ।
ಕೇಳಿಯಲಿ ನೀ ಎನ್ನ ಮನವನು
ಕಾಲಕಾಲಕೆ ತೃಪ್ತಿಪಡಿಸದೆ ॥
ಅನುಜನಾದ ವಿಚಿತ್ರವೀರ್ಯನನು ।
ವರಿಸೆಂಬ ನುಡಿಗಳು ।
ಘನವೆ ಪೌರುಷದಗ್ಗಳಿಕೆಯೇನೋ ॥

ರಾಗ – ಬೇಗಡೆ – ಅಷ್ಟತಾಳ

ಭೀಷ್ಮ : ಸರಸಿಜಾನನೆ ಕೇಳು ಪೇಳುವೆನು ।
ಪಿತನಾದ ಶಂತನು ।
ಧರಣಿಪಾಲಗೆ ಸತ್ಯವತಿಯನ್ನು ॥
ತರುವ ಕಾಲದೊಳವಳ ಪಿತ ಕಂ ।
ಧರನ ಬಳಿಯೊಳು ಗೈದೆ ಶಪಥವ ॥
ಮರಣ ಪರಿಯಂತರವು ಸತಿಯರ ।
ವರಿಸೆ ರಾಜ್ಯವನಾಳೆ ಎಂದೆನುತ ॥

ರಾಗ – ಕಾಂಬೋಧಿ – ಝಂಪೆತಾಳ

ಅಂಬೆ : ಕರುಣನಿಧಿಯವಧರಿಸು ಸರ್ವಜ್ಞ ನೀನು ॥
ಚರಣದೊಳಗರುಹುವೆನು ಮನದಳಲ ನಾನು ॥
ಧರಣಿಪತಿ ಸಾಲ್ವನೊಳು ಮನವಿರಿಸಿ ನಾನು ।
ವರಿಸುವಡೆ ವಚನವನು ಸಲ್ಲಿಸಿಹೆನು ॥
ಎನ್ನ ಪಿತನಿಗೆ ನಿಜವು ತಿಳಿಯದಿರಲಂದು ।
ಮುನ್ನ ಜರಗಿಸೆ ಪಂದ್ಯ ಹಾಳಾಯ್ತು ಹದನು ॥
(ಅಂಬೆ ಹೀಗೆನ್ನಲು ಭೀಷ್ಮನು ಆಲೋಚಿಸಿ)

ರಾಗ – ಖಮಾಚು – ಅಷ್ಟತಾಳ

ಭೀಷ್ಮ : ಅರಿತೋರ್ವ ವೃದ್ಧ ಭೂಸುರನನ್ನು ಕರೆದೆಂದ ।
ಧರಣಿಪಾತ್ಮಜೆ ಇವಳು ॥
ವರಿಸೆ ಸಾಲ್ವನ ಬಳಿ ಗೈವಳು ಜತೆಯಲ್ಲಿ ।
ತೆರಳುವುದಯ್ಯ ನೀವು ॥

(ಬ್ರಾಹ್ಮಣನು ಅಂಬೆಯನ್ನು ಸಾಲ್ವನ ಬಳಿಗೆ ಕರೆದೊಯ್ಯುವನು)

ಶ್ರೀರಾಗ – ಅಷ್ಟತಾಳ

ಸಾಲ್ವ : ಧರಣಿದೇವಗೆ ಪೀಠವಿತ್ತನು । ಖಳ ।
ತರುಣಿಯು ಕಾಣುತ್ತಲೆಂದನು ॥
ಬರಲೇನು ಕಾರಣ ಎನಲಾಗ । ಸರ ।
ಸಿರುಹಲೋಚನೆ ಪೇಳ್ದಳತಿ ಬೇಗ ॥

ರಾಗ – ಜೀವನಪುರಿ – ಝಂಪೆತಾಳ

ಅಂಬೆ : ಹಿಂದೆ ನಾ ಭೀಷ್ಮನೊಳು ಮನವಿಡದೆ ನಿನ್ನ ।
ಸುಂದರತ್ವಕೆ ಮೆಚ್ಚಿಕೊಂಡಿರ್ದಳೆನ್ನ ।
ಮಂದಮತಿ ಅಪಹರಿಸಿ ಕೊಂಡೊಯ್ದುನೆನ್ನ ।
ಬಂದಿಹೆನು ಕರುಣೆಯಲಿ ಪರಿಗ್ರಹಿಸು ಮುನ್ನ ॥

ರಾಗ – ಪುನ್ನಾಗತೋಡಿ – ಏಕತಾಳ

ಸಾಲ್ವ : ಬೇಡ ಬೇಡ ನಂಬಲಾರೆ
ಒಲಿವನಲ್ಲ ನಾನು ।
ಮೂಢಮಾತಿನಿಂದ ಕಣ್ಣ ಕಟ್ಟಬೇಡ ನೀನು ॥
ಗಾಡಿಗಾತಿ ಸುಮ್ಮನೆ ನೀ ।

ಮಾತನಾಡದಿನ್ನು ।
ವೋಡಿ ಮಂತ್ರ ಬಿಟ್ಟು ತೆರಳು ಖೋಡಿ ಕನ್ನೆ ನೀನು ॥

ರಾಗ – ವೃಂದಾವನಸಾರಂಗ – ರೂಪಕತಾಳ

ಬ್ರಾಹ್ಮಣ : ಅರಿತಿಹೆ ನಾನು ಜ್ಯೋತಿಷ ಗಣಿತಗಳನ್ನು ।
ಪರಿಶೋಧಿಸಲು ನಿಮ್ಮುಭಯರಿಗೇ ॥
ಸರಿಬರುತಿದೆ ತಾರಾಗಣಗಳ ಕೂಟವು ।
ಹರಿತಂದಳನು ಬಿಡಬೇಡ ॥

(ಸಾಲ್ವನು ತಿರಸ್ಕರಿಸಲು ಅಂಬೆ ಮತ್ತು ಬ್ರಾಹ್ಮಣ ನಿರ್ಗಮಿಸುತ್ತಾರೆ)
(ಇತ್ತ ಕಿರಾತ ಬೇಟೆಯಾಡುತ್ತಾ ಬರುವಿಕೆ)

ರಾಗ – ಖಮಾಚು – ರೂಪಕತಾಳ

ಬಂದನಾಗ ಬೇಟೆಯಾಡುತ । ಶಬರಪತಿಯು ।
ಬಂದನಾಗ ಬೇಟೆಯಾಡುತ ।
(ಇತ್ತ ಅಂಬೆ ದುಃಖದಿಂದ ಕಾಡಿನ ಮಾರ್ಗವಾಗಿ ಬರುವಳು)

ರಾಗ – ಹಂಸಾನಂದಿ – ಅಷ್ಟತಾಳ

ಅಂಬೆ : ತರುಣಿಯ ಜನುಮವ ಪಡೆದರು ಮಮಸಮ ।
ಉರುತರ ಪಾಪಿಗಳಿಹರೇನೋ ॥
ವರಿಸಿದನೊಬ್ಬನ ಹರಿಸಿದನೊಬ್ಬನು ।
ಗುರುತರ ನರಕದಿ ಬೆಂದಪೆನು ॥

(ಅಂಬೆ ದುಃಖಿಸುತ್ತಿರುವಾಗ, ಕಿರಾತ ಪ್ರವೇಶ)
(ಕಿರಾತನಲ್ಲಿ ತನ್ನ ವಿಚಾರವನ್ನು ಅಂಬೆ ಹೇಳುವಳು)

ರಾಗ – ಜಂಜೂಟಿ – ಅಷ್ಟತಾಳ

ಅಂಬೆ : ಕೇಳು ಕಿರಾತೇಶ ನೀನು । ಕಾಶಿ ।
ಪಾಲನ ಸುತೆ ಅಂಬೆ ನಾನು ।
ಕಾಳಗದೊಳು ಎಲ್ಲರನು ಗೆದ್ದ ವರನಿಗೆ ।
ಲೀಲೆಯೊಳು ತಾನೀವೆನೆನ್ನುತ
ಹಾಳು ಶಪಥವ ಗೈದ ಮತ್ಪಿತ ॥
ಧರಣಿಪಾಲಕರೆಲ್ಲ ಕೂಡಿ । ಸಂ ।
ಗರವ ಗೈಯಲು ಮನಮಾಡಿ ॥
ದುರುಳ ಭೀಷ್ಮನು ಬಂದು ಗೆಲಿದು ಸರ್ವರನಂದು ।
ಕರೆದುಕೊಂಡೊಯಿದನು ಹಸ್ತಿನ
ಪುರಿಗೆ ರಥವೇರಿಸುತ ವೇಗದಿ ॥
ಅನುಜ ವಿಚಿತ್ರವೀರ್ಯನನು । ವರಿ ।
ಸೆಂದು ಪೇಳಲು ಕೇಳಿ ನಾನು ॥
ಘನಪರಾಕ್ರಮಿ ನೀನೇ ವರಿಸೆಂದು ಪೇಳಲು ।
ಕಿನಿಸಿನಿಂದಲಿ ಬೈದು ನೂಕಿದ ।
ವನಕೆ ಬಂದೆನು ಕೇಳ್ವರಿಲ್ಲೈ ॥

ರಾಗ – ಘಂಟಾರವ – ಝಂಪೆತಾಳ

ಕಿರಾತ : ತರುಣಿ ಏಳೇಳೆನುತ ಶಬರಪತಿ ಹೂಂಕರಿಸಿ ।
ಕರದಿ ಧನುಶರಗಳನು ಧರಿಸಿ ಪೊರಟ ॥
(ಕಿರಾತ ಅಂಬೆಯನ್ನು ಕೂಡಿಕೊಂಡು ಭೀಷ್ಮನಲ್ಲಿಗೆ ಬರುವನು)

ರಾಗ – ತೋಡಿ – ಅಷ್ಟತಾಳ

ಕಿರಾತ : ಸುರನದೀಸುತನೆ ನೀನು । ಶಾಸ್ತ್ರಾರ್ಥವ ।
ನರಿತಿಹ ಧರ್ಮಜ್ಞನು ॥

ಬರಿದೆ ಕಾಶೀಶನ ತರಳೆ ಈಕೆಯು ತಂದು ।
ವರಿಸದೇತಕೆ ಬಿಟ್ಟೆಯೋ ॥

ಭೀಷ್ಮ : ನೀತಿ ಶಾಸ್ತ್ರವ ಪೇಳಲು । ಶೌನಕ ಗಾರ್ಗ್ಯ ।
ಸೂತನೊ ನೀ ಕೇಳಲು ॥
ಈ ತರುಣಿಯು ಮಾತಿನಿಂದ ಬಂದಿಹೆಯಲ್ಲ ।
ಜಾತಿ ಯಾವುದು ಪೇಳೆಲೊ ॥

ಕಿರಾತ : ಒಳ್ಳೆ ಮಾತಿನೊಳೀಕೆಯು । ವರಿಸದೆ ಬಿಡೆ ।
ಕಳ್ಳ ಬಗಿವೆ ನಿಶ್ಚಯು ॥
ಎಲ್ಲ ಜನರಿಗರಿವಂತೆ ದಂಡಿಪೆ ಧುರ ।
ಮಲ್ಲ ನಾ ಶಬರಾಧಿಪ ॥

(ಕಿರಾತ ಭೀಷ್ಮರ ಯುದ್ಧ. ಕಿರಾತ ಸೋತು ತೆರಳುವನು.)
(ಅಂಬೆ ಸಿಟ್ಟಿನಿಂದ)

ರಾಗ – ಸಿಂಹೇಂದ್ರಮಧ್ಯಮ – ಝಂಪೆತಾಳ

ಅಂಬೆ : ವರಿಸದಿರಲೆನ್ನ ನೀನು । ನಿನ್ನ ಸಂ ।
ಹರಿಸೆ ಪುಟ್ಟಿಹ ಮೃತ್ಯು ನಾನು ॥

(ಭೀಷ್ಮನು ಅಂಬೆಯುನ್ನು ಅಲಕ್ಷಿಸಲು
ಅಂಬೆ ಸಂತಾಪದಿಂದ ಅರಣ್ಯಮಾರ್ಗವಾಗಿ ಹೋಗುತ್ತಾ)

ರಾಗ – ಆನಂದಭೈರವಿ – ರೂಪಕತಾಳ

ಅಂಬೆ : ಧುರದೊಳಿವನನು । ಗೆಲುವ ಶೂರನ ।
ಧರೆಯೊಳೆಲ್ಲಿಯು । ಕಾಣೆ ಸಹಜದಿ ॥
ವನವ ಪೊಗುವೆನು । ತಪವ ಚರಿಪೆನು ।
ಹನನ ಗೈವೆನು । ಶಪಿಸುತಿವನನು ॥

(ಅಂಬೆ ತಪಸ್ಸಿನ ನಿರ್ಧಾರದಲ್ಲಿರುವಾಗ)
[ಹೋತ್ರುವಾಹನ ಪ್ರವೇಶ]

ರಾಗ – ಶಹನ – ಝಂಪೆತಾಳ

ಹೋತ್ರ : ಯಾರಮ್ಮ ನಿನ್ನ ಪುರ ।
ವ್ಯಾವೆಡೆಯು ಪೆಸರೇನು ।
ಯಾರು ಪೆತ್ತಿಹ ಸುತೆಯು ಪೇಳು ಭಯವೇನು?

ಅಂಬೆ : ಕಾಶಿಪತಿಸುತೆ ಅಂಬೆ ಘಾಸಿಗೊಂಡಿಹೆನಿಂದು ।
ದೇಶಪತಿಗಳ ನೆರಹಿ ನಡೆದ ಸ್ಪರ್ಧೆಯಲೀ ॥
ಎಲ್ಲರನು ಸದೆಬಡಿದು ಗೆದ್ದು ಒಯ್ದನು ಭೀಷ್ಮ ।
ಒಲ್ಲೆನೆಂದನು ಮತ್ತೆ ಲಗ್ನವಾಗೇ ॥

ರಾಗ – ಕುರಂಜಿ – ಆದಿತಾಳ

ಹೋತ್ರ : ಬಾಲಕಿ ಎನ್ನಯ ಪ್ರಿಯ ಸಖನಿಹನು ।
ನೀಲಕಂಠನಿಗಂಜದಿರುವ ಭಾರ್ಗವನು ॥
ತಿಳಿಸಲವಗೆ ಭೀಷ್ಮನೆಂಬ ದುರ್ಮದನ ॥
ಗೆಲಿದು ಲಗ್ನವ ಗೈವ ಪರಶುಧಾರಕನು ॥
(ಹೋತ್ರುವಾಹನ ಅಂಬೆಗೆ ಧೈರ್ಯಹೇಳಿ – ನಿರ್ಗಮನ)
(ಪರಶುರಾಮನಲ್ಲಿ ವಿಚಾರ ತಿಳಿಸಿದಾಗ)
(ಪರಶುರಾಮ, ಹೋತ್ರುವಾಹನ, ಅಂಬೆ ಪ್ರವೇಶ)

ರಾಗ – ತೋಡಿ – ರೂಪಕತಾಳ

ಪರಶುರಾಮ : ಕೇಳು ಹೋತ್ರುವಹನ ಮುದದೊಳು ।
ಹರುಷಗೊಳಿಪೆ ಇವಳ ಮನವ । ಕೇಳು ॥

ಬಾಲ ಭೀಷ್ಮ ಶಿಷ್ಯನೆನಗೆ ।
ಖೂಳನಲ್ಲ ಸತ್ಯ ಧರ್ಮ ।
ಶೀಲ ಸಾಧು ಸುಗುಣಯುತನು
ಕೇಳಿದೊಡನೆ ಎನ್ನ ಮಾತ ಬಾಲಕಿಯು ವರಿಸಿಕೊಂಬನು ॥

ರಾಗ – ಪುನ್ನಾಗತೋಡಿ – ಏಕತಾಳ

ಅಂಬೆ : ಪರಶುಧರನ ನುಡಿ ಕೇಳಿ । ಸತಿ ।
ಹರುಷಾಂಬುಧಿಯೊಳೋಲಾಡಿ ।
ದುರುಳನು ಸುರನದಿಸುತನು ।
ಎನಗೊಲಿಯನು ಶಿರವರಿ ನೀನು ॥
(ಮೂವರೂ ಭೀಷ್ಮನಲ್ಲಿಗೆ ಬರುವರು)
(ಪರಶುರಾಮ ಭೀಷ್ಮ ಸಂವಾದ)

ರಾಗ – ಹಂಸಧ್ವನಿ – ಝಂಪೆತಾಳ

ಪರಶುರಾಮ : ಎತ್ತಲಿರಿಸಿಹೆ ಭೀಷ್ಮ ಬುದ್ಧಿಗಳ ನೀನೀಗ ।
ಮತ್ತಕಾಶಿನಿ ಅಂಬೆ ಅನ್ಯ ಪುರುಷನೊಳು ॥
ಚಿತ್ತವಿಟ್ಟಿರೆ ತಂದು ತೊರೆದ ಕಾರಣವೇನು ।
ಮತ್ತಿವಳ ನೀ ಬಿಟ್ಟರಾರು ವರಿಸುವರು ॥

ರಾಗ – ದೇಶಿ – ರೂಪಕತಾಳ

ಭೀಷ್ಮ : ಗುರುವರ್ಯ ಕೇಳೀಕೆ ।
ಸಾಲ್ವನನೊಪ್ಪಿದ ।
ಪರಿಯನ್ನು ಅರಿಯದೆ ನಾನು ॥
ಕರೆತಂದೆ ಸಕಲರ ಗೆಲಿದೆನ್ನ ತಮ್ಮಗೆ ।
ಪರಿಣಯ ಮಾಳ್ಪೆನೆಂದೆನುತ ॥

ರಾಗ – ಹಂಸಧ್ವನಿ – ಅಷ್ಟತಾಳ

ಪರಶುರಾಮ : ತಮ್ಮಗಾದರು ಪರನಾರಿಯಳನು ನೀನು ।
ಹೆಮ್ಮೆಯೊಳ್ ಕರವಿಡಿದು ॥
ದುಮ್ಮದದಿಂದಲಿ ತರುವುದು ಧರ್ಮವೆ ।
ಸುಮ್ಮನೆ ವರಿಸಿವಳ ॥

ರಾಗ – ದೇಶಿ – ಅಷ್ಟತಾಳ

ಭೀಷ್ಮ : ಒಮ್ಮನದಿಂದಲಿ ಪೇಳುವೆ ಗುರುರಾಯ ।
ಸಮ್ಮತವಲ್ಲವಿದು ॥

ರಾಗ – ಹಂಸಧ್ವನಿ – ಅಷ್ಟತಾಳ

ಪರಶುರಾಮ : ಸಮ್ಮತವಲ್ಲವೆ ಪಿಡಿ ಪಿಡಿ ಅಸ್ತ್ರವ ।
ಹೆಮ್ಮೆಯನಡಗಿಪೆನು ॥

ರಾಗ – ಆರಭಿ – ತ್ರಿವುಡೆತಾಳ

ಭೀಷ್ಮ : ಗುರುವೆ ನಿನ್ನೊಳು ಸಮರ ಗೈವೆನು ।
ಹರಸುವುದು ಜಯವಾಗುವಂದದಿ ।
ಪರಮಕರುಣಾಸಿಂಧು ಶಿಷ್ಯನ ಕಾಯ್ದು ರಕ್ಷಿಪುದು ॥
(ಗುರು ಹರಸುತ್ತಾನೆ)

(ಭೀಷ್ಮ ಪರಶುರಾಮರ ಯುದ್ಧ)

(ಪರಶುರಾಮನು ಸೋತು ದುಃಖಿಸುತ್ತಾನೆ)

ರಾಗ – ಸಾವೇರಿ – ಅಷ್ಟತಾಳ

ಪರಶುರಾಮ : ಪರಮ ಶಿಷ್ಯನ ಮುಂದೆ ಸೋಲಾ ।
ವರಿಸಿ ತಗ್ಗುವುದಾಯ್ತೆ ಕಾಲಾ ॥
ಪರಮ ಪಾವನ ಗಣರಾಯ ॥
ಮರೆಯ ಪೊಗ್ಗುತೆ ನಮಿಪೆ ಜೀಯ ॥

(ಗಣಪನು ಪರಶುರಾಮನ ಬೆಂಬಲಕ್ಕೆ ಭೃಕುಟಿಯನ್ನು ಕಳುಹಿಸುವನು)

(ಆಗ ಭೀಷ್ಮನು ವಸುಗಳನ್ನು ಬೇಡುವನು)

ರಾಗ – ಸಾವೇರಿ – ಅಷ್ಟತಾಳ

ಭೀಷ್ಮ : ಅಷ್ಟವಸುಗಳೆ ಭವಣೆ ನೋಡಿ ।
ಕಷ್ಟಕಾಲದಿ ಪಾರುಮಾಡಿ ॥

(ಭೀಷ್ಮನ ಬೆಂಬಲಕ್ಕೆ ವಸುಗಳು ಗಂಧರ್ವನನ್ನು ಕಳಿಸುವರು)
(ಭೃಕುಟಿ ಗಂಧರ್ವರು ಯುದ್ಧಮಾಡಿ ಇಬ್ಬರೂ ಹಿಂಜರಿಯುತ್ತಾರೆ)

(ಪುನಃ ಭೀಷ್ಮ ಪರಶುರಾಮರ ಯುದ್ಧ)
(ಭೀಷ್ಮನು ಮೂರ್ಛೆಹೋಗುತ್ತಾನೆ)

[ಗಂಗೆಯ ಪ್ರವೇಶ – ದುಃಖದಲ್ಲಿ]

ರಾಗ – ಆನಂದಭೈರವಿ – ಆದಿತಾಳ

ಗಂಗೆ – ಕುವರ ನಿನ್ನ ಸೋಲಿದೇನು ।
ಬವರದೊಳ್ ಇಂತಾಯ್ತೆ ॥

(ಭೀಷ್ಮನು ಚೇತರಿಸಿ ಪುನಃ ಯುದ್ಧಸನ್ನದ್ಧನಾಗುತ್ತಾನೆ)

ಆಗ ಗಂಗೆ ಭೀಷ್ಮನಿಗೆ

ರಾಗ – ಸೌರಾಷ್ಟ್ರ – ಆದಿತಾಳ

ಗಂಗೆ : ಬೇಡ ಮಗನೆ ಗುರುವಿನೊಳು
ಮಾಡಬೇಡ ಧುರವನಿನ್ನು ।
ರೂಢಿಯೊಳಗೆ ನಗೆಗೇಡಹುದು ।
ಮೂಢಮತಿಯ ತೆರದಿ ನೀನು ॥
(ಗಂಗೆ ಹೇಳಿದರೂ ಕೇಳದೆ ಭೀಷ್ಮನು ಕೋಪದಿಂದಿರಲು)

(ಗಂಗೆ ಪರಶುರಾಮನೊಡನೆ)

ಗಂಗೆ : ಪಿಡಿದ ಛಲವ ಭೀಷ್ಮ ಬಿಡನು ।
ಒಡನೆ ದಯವನಿರಿಸಿ ನೀವು ॥

(ಪರಶುರಾಮನು ಕ್ರೋಧದಿಂದ ಗಂಗೆಗೆ ಹೇಳುವನು)

ರಾಗ – ಮೋಹನ – ಅಷ್ಟತಾಳ

ಪರಶುರಾಮ : ಮೂಢೆ ಕೇಳ್ ನಿನ್ನಯ ಮಗ ತಾನೆ ಛಲವಂತ ।
ಹೇಡಿಯೆ ನಾನೀಗಳು ॥

ರಾಗ – ತೋಡಿ – ಏಕತಾಳ

ಗಂಗೆ : ಪರಶುಧರನೆ ಕೇಳಾದರೆ ।
ತರಳ ಭೀಷ್ಮನಿಂಗೆ ನಾನು
ಧರಿಸಲಿಹೆನು ಸೂತತನವ ಪರಿಯನೋಳ್ಪುದು ॥

(ಗಂಗೆ ಮಗನಿಗೆ ಸಾರಥ್ಯ ಮಾಡುತ್ತಾ ಯುದ್ಧ ತಯಾರಿಯಲ್ಲಿರುವಾಗ)
[ನಾರದನ ಪ್ರವೇಶ]

ರಾಗ – ಸುರುಟಿ – ಏಕತಾಳ

ನಾರದ : ಸುರನದಿಸುತ ತಾಳು । ಪೇಳುವೆ । ಕರುಣದಿ ನೀ ಕೇಳು ॥
ಗುರುವಿನ ಮೇಲೀ ಅಸ್ತ್ರವ ಬಿಡದಿರು ।
ಪರಮ ಪಾತಕವು ಬರಲಿದೆ ತಡೆ ತಡೆ ॥
(ಭೀಷ್ಮ ಗುರುವಿಗೆ ವಂದಿಸುತ್ತಾನೆ)

ರಾಗ – ಭೂಪಾಳಿ – ಅಷ್ಟತಾಳ

ಪರಶುರಾಮ : ಪರಮ ಶಿಷ್ಯನೆ ನಿನ್ನ ಧುರಕೆ ಮೆಚ್ಚಿದೆ ನಾನು ।
ತೆರಳುವೆ ನಿನಗಾನು ಸೋತೆ ॥
[ಪರಶುರಾಮನ ನಿರ್ಗಮನ]

(ಅಂಬೆ ಸಿಟ್ಟಿನಿಂದ)

ರಾಗ – ಮೋಹನ – ಅಷ್ಟತಾಳ

ಅಂಬೆ : ಹಿಡಿ ಹಿಡಿ ಧನುವನ್ನು ನಿಲ್ಲೆನ್ನ ಸರಿಸದಿ ।
ದಡಿಗತನವನು ತೋರ್ಪೆನು ॥
(ಭೀಷ್ಮನು ಬಿಲ್ಲು ಬಿಸುಟು ನಿಲ್ಲುತ್ತಾನೆ)

ರಾಗ – ಮೋಹನ – ಭಾಮಿನಿ

ಅಂಬೆ : ಎತ್ತ ಹೋದರು ಬಿಡೆನು ನಿನ್ನನು ।
ನೆತ್ತರಿನ ಲಿಪಿಯಲ್ಲಿ ಬರೆದಿಡು ।
ಸತ್ತು ಪುನರಪಿ ಜನಿಸಿ ಎನ್ನಯ ಸೇಡ ಸಲ್ಲಿಪೆನು ॥
(ಅಂಬೆ ಬೆಂಕಿಯಲ್ಲಿ ಪ್ರಾಣ ತ್ಯಾಗ ಮಾಡುವಳು)

ಮಂಗಲ : ರಾಗ – ಧವಳಾರ – ಆದಿತಾಳ

ಜೀವಾಜೀವರ ನಿಲಿಸಿದಗೇ । ಭಾವಾಭಾವರ ಸಲಿಸಿದಗೇ ।
ಜೀವಾತ್ಮರುಗಳ ತೃಣ ದೋಷಾಧಿ ಎ ।
ಹಾವಭಾವದೊಳು ಸೇವಿಪಗೇ । ಮಂಗಲಂ ಜಯ ಮಂಗಲಂ ॥
ಮೊನ್ನೆಯ ತೆರೆಯನು ಸರಿಸಿದಗೇ । ನಿನ್ನೆಯ ದಿನವನು ಬರಿಸಿದಗೇ ॥
ಇನ್ನೀ ದಿನದಲಿ ಎಲ್ಲರ ಕುಣಿಸುತೆ ।
ಮುನ್ನಿನ ಆಟವ ಹೂಡುವಗೇ ॥ ಮಂಗಲಂ ಜಯ ಮಂಗಲಂ ॥

ನಳ-ದಮಯಂತಿ

ಪ್ರಸಂಗಕರ್ತ :

ಧ್ವಜಪುರ ನಾಗಪ್ಪಯ್ಯ

ಸಂಪಾದಕ :

ಭಾಗವತ ನೀಲಾವರ ರಾಮಕೃಷ್ಣಯ್ಯ

ಯಕ್ಷಗಾನ ಕೇಂದ್ರ, ಉಡುಪಿ – 576102

ನಳ - ದಮಯಂತಿ

ರಾಗ – ನಾಟಿ – ತ್ರಿಪುಟತಾಳ

ಪ್ರಾರ್ಥನೆ : ಗಜಮುಖದವಗೆ ಗಣಪಂಗೇ । ಚಲ್ವ ।
ತ್ರಿಜಗವಂದಿತನಿಗಾರತಿ ಎತ್ತಿರೇ ॥ ಪಲ್ಲ ॥
ಒಳ್ಳಿತದವಲು ತೆಂಗಿನಕಾಯಿ ಕಡಲೆಯು ॥
ಎಳ್ಳುಂಡಾನಿಗೆ ಕಬ್ಬು ಮೆಲುವವಗೇ ॥
ಬೆಳ್ಳಿಯ ಉಲಿಗೆಜ್ಜೆಗಳ ಕಟ್ಟಿ ಕುಣಿವಂಥ ॥
ಡೊಳ್ಳಿನ ಗಣಪಗಾರತಿ ಎತ್ತಿರೇ ॥ ೧ ॥
ದೇವತೆಗಳ ಕೈಯ ಕಪ್ಪವ ಕೊಂಬಗೆ ।
ದಾವಾಗ್ನಿಯಂದದಿ ಮೆಲುವವಗೇ ॥
ಆವಾಗ ಮನದಲ್ಲಿ ನೆನೆದ ಇಷ್ಟಾರ್ಥವ ॥
ನೀವ ಗಣೇಶಗಾರತಿ ಎತ್ತಿರೇ ॥ ೨ ॥

ರಾಗ – ತೋಡಿ – ಆದಿತಾಳ

ಒಡ್ಡೋಲಗ : ನಿಷಧರಾಯನ ಭಾಗ್ಯ ಭವ್ಯ । ಸಂತೋಷ ದಿವ್ಯ ।
ನಿಷಧರಾಯನ ಭಾಗ್ಯ ಭವ್ಯ ॥

(ನಳನು ಪತ್ನಿ ಪುತ್ರ ಸಹಿತ ಒಡ್ಡೋಲಗಗೊಟ್ಟು ಸಂತೋಷದಿಂದ ಆಟ ಆಡಿ ದಣಿಯುತ್ತಾನೆ. ಆಗ ಶನಿ ಪ್ರವೇಶಿಸಿ ಹಿಡಿಯುತ್ತಾನೆ.)

ರಾಗ – ಮಧ್ಯಮಾವತಿ – ಆದಿತಾಳ

ನಳ : ಕುಡಿಯೆ ಜಲವ ಕಡು ತೃಷೆಯೊಳಾಕ್ಷಣದೀ ॥

ಶನಿ : ಕಡುಪಾಪಿ ಶನಿಯು ಕಾಣುತಲಾಗ ಭರದೀ ॥
ತಡವಿಲ್ಲವೆನಗಿದೆ ಸಮಯವೆಂದೆನುತ ॥
ಬಿಡದೆ ಹಿಡಿದ ತನ್ನಭೀಷ್ಟವಾಯ್ತೆನುತ ॥ ೧ ॥

(ಹೀಗೆ ಶನಿ ತನ್ನ ಪ್ರಭಾವ ಬೀರಿ ಮರಳಿದಾಗ ನಳನು ತನಗೇನಾಗಿದೆ ಎಂದು ತಿಳಿಯದೆ ಭ್ರಾಂತನಾಗಿ ನಿರ್ಗಮಿಸುತ್ತಾನೆ.)

[ಶನಿಪ್ರವೇಶ]

ರಾಗ – ಮಧ್ಯಮಾವತಿ – ಆದಿತಾಳ

ಶನಿ : ಅಷ್ಟಸಂಪದವೆಲ್ಲ ನಷ್ಟವ ಗೈಸೀ ।
ಥಟ್ಟನೆ ವನಕೆ ಅಟ್ಟಲುಪಾಯ ನೆನಸೀ ॥
ಗುಟ್ಟಿನೊಳ್ ಘನ ವಿಪ್ರವೇಷವ ಧರಿಸಿ ॥
ದುಷ್ಟ ಪುಷ್ಕರನಲ್ಲಿಗೈತಂದ ಸಹಸಿ ॥

(ಹೀಗೆ ಬ್ರಾಹ್ಮಣವೇಷದಿಂದ ಶನಿಯು ಪುಷ್ಕರನಲ್ಲಿಗೆ ಬರುತ್ತಾನೆ. ಪುಷ್ಕರನ ಒಡ್ಡೋಲಗ.)

ರಾಗ – ನಾಟಿ – ರೂಪಕತಾಳ

ಪುಷ್ಕರ : ಧರಣಿಯಮರನ । ಬರವ ಕಾಣುತ ॥
ಇರದೆ ಎದ್ದು ಪು । ಷ್ಕರನು ಎರಗುತ ।
ಭರದಿ ಕೇಳ್ದನು ನೀವೇನು ಕಾರ್ಯದೀ ।
ಅರರೆ ಬಂದಿರೀ ನೀವರುಹಿ ಗಾಢದಿ ॥

ಶನಿಬ್ರಾಹ್ಮಣ : ಚದುರ ಭೂಪನೇ ನಾ ಬಂದ ಹದನನು ।
ಮೋದದಿಂದಲೀ ಪೇಳ್ವೆನದರನು ॥

(ಬ್ರಾಹ್ಮಣನು ಕಿವಿಮಾತಿನಿಂದ ಪುಷ್ಕರನನ್ನು ಹುರಿದುಂಬಿಸಿ, ಜೊತೆಗೂಡಿ ನಳನಲ್ಲಿಗೆ ಹೋಗುತ್ತಾನೆ.)

ರಾಗ – ಕಾಂಬೋಧಿ – ಝಂಪೆತಾಳ

ಆ ಸಮಯದೊಳು ಕಪಟ ಭೂಸುರನನೊಡಗೊಂಡು ।
ಮೋಸಕಾರಿಯು ಬಂದ ನೈಷಧನ ಪುರಿಗೆ ॥

ಪುಷ್ಕರ : ಜೀಯ ಲಾಲಿಸು ಪಗಡೆಕಾಯಿಗಳನೀವಿಪ್ರ ॥
ಆಡಬೇಕೆನುತೀಗ ಬಯಸಿ ತಂದಿಹನು ॥
(ಬ್ರಾಹ್ಮಣನು ಪಗಡೆಮಣೆ ಬರೆದು ಸಿದ್ಧಗೊಳಿಸುವನು)
(ನಳ ಪುಷ್ಕರರು ಆಡುವರು)

ರಾಗ – ಕಲ್ಯಾಣಿ – ಆದಿತಾಳ

ಪದ್ಯ : ಆಡಿದರು । ಪಗಡೆ । ಆಡಿದರು ॥
ಆಡಿದರು । ಪಗಡೆ । ಆಡಿದರು ॥
(೨ ಸಲ ಆಡಿಯೂ ನಳನು ಸೋಲುವನು. ವಿಪ್ರನು ಹಿಗ್ಗಿನಿಂದ ನಿರ್ಗಮನ)
(ಇತ್ತ ದಮಯಂತಿ ಮಗನೊಡನೆ ಸಂತೋಷದಿಂದಿರುವಿಕೆ)

ರಾಗ – ಬಿಲಹರಿ – ಅಷ್ಟತಾಳ

ಪದ್ಯ : ಎಸೆವ ತಾರಾವಳಿಯ ಮಧ್ಯದಿ । ಪೂರ್ಣ ॥
ಶಶಿಯು ಶೋಭಿಸುವಂತೆ ಚಂದದಿ ॥
ಬಿಸಜಗಂಧಿನಿಯರ ಸ್ತೋಮದಿ ॥ ಇರೆ ॥
ಕುಶಲದಿ ದಮಯಂತಿ ಪೀಠದಿ ॥
(ಅಲ್ಲಿಗೆ ನಳನ ಬರುವಿಕೆ)

ರಾಗ – ನಾದನಾಮಕ್ರಿಯೆ – ಅಷ್ಟತಾಳ

ಪದ್ಯ : ತ್ವರಿತದಿಂದಾಕೆಯ ಕಂಡನು । ಕಣ್ಣೊಳ್ ।
ಸುರಿವ ಕಂಬನಿಯಿಂದ ನುಡಿದನು ॥

ಪರಮ ಮಂಗಲೆ ಇತ್ತ ಕೇಳವ್ವ । ಈಗ ।
ಒರೆಯಲೆಂತುಟೊ ಬಂದ ದುಗುಡವ ॥
ದುಷ್ಟ ಪುಷ್ಕರನೊಳು ಜೂಜನು । ನಿನ್ನ ।
ಪಟ್ಟದರಸನಾಡಿ ಸೋತನು ॥

ರಾಗ – ಕಾಂಬೋಧಿ – ಏಕತಾಳ

ನಳ : ಪುಲ್ಲನಯನೆ ಭೀಮರಾಯನಲ್ಲಿ ಜನಿಸಿ ಬಯಸಿ ಎನ್ನ ।
ನಿಲ್ಲದೆ ಸೇರ್ದುದಕೆ ಬವಣೆಗೊಳ್ಳುವುದಾಯ್ತೆ ॥

ರಾಗ – ಮುಖಾರಿ – ಏಕತಾಳ

ದಮಯಂತಿ : ಅರಿಯದಜ್ಞಾನಿಗಳ ತೆರದಿ ।
ಬರಿದೆ ಚಿಂತಿಸುವರೆ ವಾಣೀ ।
ವರನು ಬರೆದ ಲಿಪಿಯ ಮೀರ ।
ಲಳವೇನೋ ಕಾಂತ ॥
(ನಳ-ದಮಯಂತಿಯರು ದುಃಖದಿಂದ ಮಕ್ಕಳನ್ನು ಬೀಳ್ಕೊಳ್ಳುವುದು)

ರಾಗ – ಆನಂದಭೈರವಿ – ಅಷ್ಟತಾಳ

ಪದ್ಯ : ಸುರಿವ ಕಂಬನಿಯಿಂದ ತೊಯ್ಯುತಾ । ಕಣ್ಣ ।
ಒರೆಸಿ ದುಃಖದಿ ಮುಳುಗೇಳುತ್ತಾ ॥
ಧರಿಪ ಮೈಮನಗಳ ಬಿಗಿಯುತ್ತಾ । ತನ್ನ ।
ತರಳರ ಮೊಗವನ್ನೇ ನೋಡುತ್ತಾ ॥
ಕರೆದು ಮಕ್ಕಳ ತಬ್ಬಿ ಹರಸುತ್ತಾ । ನಿಮ್ಮ ।
ಹಿರಿಯ ತಾತನ ಸೇರಿ ಎನ್ನುತ್ತಾ ॥
(ಮಕ್ಕಳನ್ನು ಬ್ರಾಹ್ಮಣನೊಡನೆ ತೌರಿಗೆ ಕಳಿಸಿ ದಂಪತಿಗಳು ಕಾಡುಸೇರುವರು)
(ಬ್ರಾಹ್ಮಣನು ಮಕ್ಕಳನ್ನು ಕರೆದುಕೊಂಡು ಹೋಗುವನು)
(ಅರಣ್ಯಮಾರ್ಗದಲ್ಲಿ ನಳದಮಯಂತಿಯರು ಸಾಗುವರು)

ರಾಗ – ತೋಡಿ – ರೂಪಕತಾಳ

ಪದ್ಯ : ನೆಳಲ ಕಾಣದೆ ಬಸವಳಿದು ಹೆಜ್ಜೆಯನಿಡುತ ।
ಕುಳಿತು ಅಲ್ಲಲ್ಲಿ ಶೋಕಿಸುತಾ ॥
ಬಳಲಿ ಬಾಯಾರುತೆ ಬಳುಕಿ ಬಾಯ್‌ಬಿಡುತಿಹ ।
ಲಲನೆಯ ಕಂಡು ಸಂತೈಸಿ ॥

ರಾಗ – ಶಂಕರಾಭರಣ – ಏಕತಾಳ

ವ್ಯಥಿಸಿ ಬೆಂದು ಬಳಲಿ ಉರ್ವಿ ।
ಪತಿಯುತನ್ನ ಸತಿಯು ಸಹಿತ ।
ಪಥವ ನಡೆಯುತಿರಲು ಲಕ್ಷ್ಮೀ ।
ಪತಿಯ ನೆನೆಯುತಾ ॥

(ಇಬ್ಬರೂ ಸೋತು ದಮಯಂತಿ ಬಳಲಿ ನಿದ್ರಿಸಿದಾಗ ನಳನು ಅವಳ ಸೀರೆ ಸೆರಗನ್ನೇ ಕತ್ತರಿಸಿ ಉಟ್ಟುಕೊಂಡು ದಮಯಂತಿಯನ್ನು ಬಿಟ್ಟು ಹೋಗುವನು)

ರಾಗ – ಅಠಾಣ – ಅಷ್ಟತಾಳ

ಪದ್ಯ : ಹೇಗೆ ಈ ಅಡವಿಯಲೀ । ಓರ್ವಳ ಬಿಟ್ಟು ।
ಹೇಗೆ ಮುಂದಡಿಯಿಡಲೀ ॥
(ನಿದ್ದೆಯಿಂದ ಎದ್ದ ದಮಯಂತಿ ಭೀತಳಾಗಿ)

ರಾಗ – ಶಹನ – ಆದಿತಾಳ

ದಮಯಂತಿ: ಎಲ್ಲಿಗೆ ಪೋದೆಯೊ ಎನ್ನ । ವಲ್ಲಭ । ಸದ್ಗುಣ ರನ್ನ ।
ನಿಲ್ಲದು ನಿಲ್ಲದು ಹರಣ । ಎಳ್ಳನಿತಿಲ್ಲವೆ ಕರುಣ ॥
[ಕಿರಾತನ ಪ್ರವೇಶ]

ರಾಗ – ಮಾಂಡ್ – ಏಕತಾಳ

ಕಿರಾತ : ಯಾರೆಲೆ ಹುಡುಗಿ ನೀನು । ಯಾರೆಲ್ಲೈದಾರೆ ಪೇಳು ।
ಯಾರ ಸಂಗಡ ಬಂದಿಯೋ । ಹೇಳ್ ಹೇಳು ಬೇಗ ॥
ಚದುರೆ ನಿನ್ನಪ್ಪನ್ಯಾರೆ । ಇದಕೊ ಮೋರೆಯ ತೋರೆ ॥
ಮದುವೆ ಆಗ್ಯೆತೊ ಇಲ್ಲವೋ । ಹೇಳ್ ಹೇಳ್ ಬೇಗ ॥

ರಾಗ – ಶಂಕರಾಭರಣ – ತ್ರಿಪುಟತಾಳ

ದಮಯಂತಿ : ಕೇಳು ವ್ಯಾಧನೆ ನೀತಿಮಾರ್ಗವ ।
ಪ್ರೌಢ ನೀನು ॥
ಕಾಕಪೋಕರು ನುಡಿವ ನುಡಿಗಳು ।
ಸಲುವುದೇನೋ ॥

ರಾಗ – ಹಿಂದೋಳ – ತ್ರಿವುಡೆತಾಳ

ಕಿರಾತ : ಮುನ್ನಿಸೆನ್ನಯ ದುಷ್ಟ ರೀತಿಯ ।
ಇನ್ನು ತೋರೆನು ಮನದ ಚಪಲವ ।
ಸನ್ನುತಾಂಗಿಯೆ ಪೇಳು ತವಕದಿ ।
ಏನು ಬವಣೆಯಿದು ॥
ನಿನ್ನನೀಪರಿ ವನಕೆ ತಂದಿಹ ।
ಖಿನ್ನ ಕಾರಣವೇನು ಪೇಳೌ ॥
ಮುನ್ನಿನಾ ಗುರಿ ಪೇಳಿದೊಡೆ ನಾ ।
ನಿನ್ನನೊಯ್ಯುವೆನು ॥

ರಾಗ – ಶಂಕರಾಭರಣ – ತ್ರಿಪುಟತಾಳ

ದಮಯಂತಿ : ವನದಿ ಎನ್ನಯ ರಮಣನಗಲಿದ ।
ಇನಿತು ಕಾಣದು ದಾರಿಯೊಂದೂ ॥

ಸನಿಯ ನಗರಕೆ ಒಯ್ದು ಆಸರೆ ।
ಎನಗೆ ಕೊಡಿಸುವೆಯ ॥

(ಕಿರಾತನು ದಮಯಂತಿಯನ್ನು ಚೈದ್ಯರಾಜನಲ್ಲಿಗೆ ಕರೆದುಕೊಂಡು ಹೋಗುವನು)

[ಚೈದ್ಯ ದಂಪತಿಗಳ ಒಡ್ಡೋಲಗ]

(ದಮಯಂತಿ ಚೈದ್ಯರಾಣಿಗೆ ಶರಣಾಗುವಳು)

ರಾಗ – ಮೋಹನ – ಅಷ್ಟತಾಳ

ರಾಣಿ : ತರುಣಿ ನೀನ್ಯಾರು ನಿನ್ನಯ ರಾಜ್ಯವ್ಯಾವುದು ।
ವರನಾರು ಪೇಳೆಮಗೆ ॥
ಇರುವ ಠಾವುಗಳೆಲ್ಲಿ ಬಂದೆ ಒಬ್ಬಳೆ ಏಕೆ ।
ತಿರುಕುಳಿಯಂದದ ಪರಿಯಿದು ಏನು ॥

ರಾಗ – ಕಾನಡ – ಅಷ್ಟತಾಳ

ದಮಯಂತಿ : ಕೇಳಾದರೆ ನೃಪನರಸಿ ಎನ್ನಯ ಕ್ಲೇಶ ।
ಪೇಳುವೆ ನಿನ್ನೊಡನೆ ॥
ಆಳಿಕೊಂಡಿರೆ ಎನ್ನ ರಮಣನೊಂದೂರನು ।
ಕಾಲವಶದಿ ಜೂಜನಾಡುತೆ ಸೋತನು ॥
ವನವಾಸಕೈತಂದು ದಣಿವಿಲಿ ಮಲಗಿರ್ದೆ ।
ಕ್ಷಣಹೊತ್ತು ನಿದ್ದೆಯುಲಿ ॥
ಎನ್ನ ವಂಚಿಸಿ ಮೊನ್ನೆ ಇರುಳು ನಲ್ಲನು ಪೋದ ।
ತನುವ ರಕ್ಷಿಪರಿಲ್ಲ ಪರದೇಶಿಯಾದೆ ॥

ರಾಗ – ಖಮಾಚು – ಝಂಪೆತಾಳ

ರಾಣಿ : ಬರಿದೆ ಯೋಚಿಸಲೇಕೆ ತರಳಾಕ್ಷಿ ನೀನು ।
ಇರು ಸ್ವಸ್ಥದೊಳಗಿಲ್ಲಿ ಪರಿಪಾಲಿಸುವೆನು ॥
(ರಾಣಿ ದಮಯಂತಿಗೆ ಆಶ್ರಯ ನೀಡುತ್ತಾಳೆ)
(ದೊರೆಸಹಿತ ಮೂವರ ನಿರ್ಗಮನ)

(ಇತ್ತ ನಳನು ಬರುತ್ತಿರುವ ದಾರಿಯಲ್ಲಿ ಕಾಡ್ಗಿಚ್ಚು)

ರಾಗ – ರೇಗುಪ್ತಿ – ಝಂಪೆತಾಳ

ಪದ್ಯ : ಆ ಸಮಯದೊಳಗೆ ಕಾಳ್ಗಿಚ್ಚು । ರೋಷದಿಂ ।
ಸೂಸುತಿರೆ ನಾಲ್ದೆಸೆಗೆ ಅದರ ಕೆಚ್ಚು ॥
ಬಿದಿರಮೆಳೆ ತುದಿಯಲೊಂದು । ಕಾಳುರಗ ।
ಪೊದೆದುಕೊಳಲುರಿಗೆ ಬೆಂದು ॥
ಚದುರ ನೃಪ ನಳನಲ್ಲಿಗೆ । ಬರೆ ಕಂಡು ।
ಒದಗಿನಿಂ ಪೇಳ್ದುದವಗೆ ॥

ಸರ್ಪ : ಸತ್ಯ ಧರ್ಮದ ಶೀಲನೆ । ನೋಡಿತ್ತ ।
ಹತ್ಯಗೊಂಬುವ ಎನ್ನನೆ ।
ಎತ್ತಿ ಕಾಪಾಡು ದಯದಿ । ಮೂಜಗಕೆ ।
ಸ್ತುತ್ಯನೆನಿಸುವೆ ನಿತ್ಯದಿ ॥

(ನಳನು ಕರುಣೆಯಿಂದ ಸರ್ಪವನ್ನು ಬೆಂಕಿಯಿಂದ ರಕ್ಷಿಸುತ್ತಾನೆ. ಸರ್ಪವು ನಳನನ್ನು ಕಚ್ಚುತ್ತದೆ.)

ರಾಗ – ಮಧ್ಯಮಾವತಿ – ರೂಪಕತಾಳ

ನಳ : ಹೀನ ಪಾಪಿಯೆ । ಎನ್ನ ನಂಬಿಸಿ ।
ಗೋಣ ಕೊಯ್ದೆಯ । ಇದೇನು ನ್ಯಾಯವು ॥

ಸರ್ಪ : ನೀತಿವಂತನೆ । ನಿನಗೆ ಎಸಗಿದ ।
ಘಾತವಲ್ಲಿದು । ಕೊನೆಗೆ ತಿಳಿವುದು ॥
(ನಳನು ವಿಕಾರಗೊಂಡು ಬಾಹುಕನಾಗುತ್ತಾನೆ)

ರಾಗ – ಕೇದಾರಗೌಳ – ಅಷ್ಟತಾಳ

ಪದ್ಯ : ನಿರುಕಿಸುವರಿಗತಿ ಹೇಸಿಕೆ ಬರಿಸುವ ।
ಕರಿಬಿಂಬ ತಳೆದಾತ ॥
ತ್ವರೆಯೊಳಯೋಧ್ಯಾ ನಗರವ ಸೇರಿದ ।
ತಿರಿದುಣ್ಣುತಲಾತ ॥

(ಋತುಪರ್ಣನ ಒಡ್ಡೋಲಗ)

ಬಾಹುಕ : ಮೆಲ್ಲನೆ ಬಂದನು ಜೋಡಿಸಿ ಕರಗಳ
ಝಲ್ಲನೆ ಬಾಗಿದನು ॥

ಋತುಪರ್ಣ : ಎಲ್ಲಿ ನಿನಗೆ ನೀನಾರೆಲೊ ಪೂರ್ವದೊ ।
ಳೆಲ್ಲಿದ್ದವನಯ್ಯಾ ॥

ಬಾಹುಕ : ಬಲ್ಲಿದ ದೊರೆ ತಾ ಕೇಳಲು ಉಸುರಿದ ।
ಮೆಲ್ಲನೆ ವಂದಿಸುತ ॥

ರಾಗ – ಕೇದಾರಗೌಳ – ಅಷ್ಟತಾಳ

ಬಾಹುಕ : ನಿಷಧಪುರಾಧಿಪ ಶಶಿವಂಶಜ ನಳ ।
ಅಸಮ ಪರಾಕ್ರಮನು ॥
ಕುಶಲದೊಳಾತನ ಸಾಸಿರ ಹಯುಗಳ ।
ಗಸಣೆಯ ಪಾಲಕನು ॥

ವಿಷಮುಲೆತ್ತಗಳಾಡಿ ಸೋತನು ಸಕಲವ ।
ಹಸವಿಲ್ಲದ ಬದುಕು ॥
ಕರೆವರು ಬಾಹುಕನೆಂದೆಂಬ ಪೆಸರೊಳು ।
ಶರಣೆಂಬೆನು ಸಲಹು ॥

ರಾಗ – ಬಿಲಹರಿ – ಅಷ್ಟತಾಳ

ಋತುಪರ್ಣ : ಹರಹರ ಘನತರ ಚಕ್ರವರ್ತಿಗೆ ಈ ।
ಪರಿಯಾದುದೆ ವಿಧಿಯೇ ॥
ಮರುಗದಿರೆಲೊ ನೀ ಎನ್ನಶ್ವದಳವನ್ನೆ ।
ಪರಿಪಾಲಿಪನಾಗು ॥
(ಇಬ್ಬರೂ ನಿರ್ಗಮಿಸಿ ಬೇಟೆಯಾಡುತ್ತಾ ಬರುವರು)

ರಾಗ – ಖಮಾಚು – ರೂಪಕತಾಳ

ಪದ್ಯ : ಬಂದನಾಗ ಬೇಟೆಯಾಡುತ ।
ಋತುಪರ್ಣರಾಯ ।
ಬಂದನಾಗ ಬೇಟೆಯಾಡುತ ॥
(ಬೇಟೆಯಾಡಿ ಜೊತೆ ತಪ್ಪಿ ದೊರೆಯು ದಣಿಯುವನು.)

ರಾಗ – ಸಾವೇರಿ – ಝಂಪೆತಾಳ

ಪದ್ಯ : ಕಾರುಗತ್ತಲೆಯೊಳಗೆ ಕಂಗೆಟ್ಟು ಭೀತಿಯಲಿ ।
ದಾರಿಗಾಣದೆ ಕಲ್ಲು ಗಿಡಮರಗಳೆಡವುತಲಿ ।
ಧಾರುಣಿಪ ಕ್ಷುಧೆಯ ಬಾಧೆಯಲಿ ತಾ ಬಸವಳಿದು ।
ವೀರಬಾಹುಕಗೆಂದ ತೊದಲುನುಡಿಗಳ ॥

(ಬಾಹುಕನು ದೊರೆಯನ್ನು ಅರಸುತ್ತಾ ಬಂದು, ಕಂಡು ತೃಷೆಗಾಗಿ ನೀರು ತಂದುಕೊಟ್ಟು ನಂತರ ದೊರೆಯ ಹಸಿವನ್ನು ತಿಳಿದು)

ರಾಗ – ಸಾವೇರಿ – ವಾರ್ಧಕ್ಯ

ಬಾಹುಕ : ಅರರೆ ಬಲು ಹಸಿವಿಂದ ಧೊರೆಯು ಕಂಗೆಟ್ಟಿರಲು ।
ತ್ವರಿತದಿಂ ತಾ ತಂದ ಪಾತ್ರೆಯಲಿ ತಂಡುಲವ ।
ಸುರಿದು ನೋಡಲು ಕ್ಷಣಕೆ
ಸುರಸ ಪಾಕಗಳಾದುದು ॥
ಧರಣಿಪನನೆಬ್ಬಿಸುತ ವರಭೋಜನವ ಗೈಸೆ ।
ಹರುಷದಿಂ ರುಚಿ ಸವಿದು ಮೆಚ್ಚಿ ಬಾಹುಕಗೆಂದ ।
ಪರಮಾಪ್ತ ನೀನೆನಗೆ ವರಬಾಣಸಿಗನು ॥

(ನಳಬಾಹುಕರ ನಿರ್ಗಮನ)

(ಇತ್ತ ಕುಂಡಿನನಗರಕ್ಕೆ ಬ್ರಾಹ್ಮಣನು ನಳನ ಮಕ್ಕಳನ್ನು ಕರೆತರುವನು)

ರಾಗ – ಧನ್ಯಶ್ರೀ – ಅಷ್ಟತಾಳ

ಪದ್ಯ : ಇತ್ತಲಾ ವಿಬುಧನು । ದಮಯಂತಿದೇವಿಯು ।
ಪೆತ್ತ ಮಕ್ಕಳ ತರಲು ॥
ಭೀಮಕ : ಚಿತ್ತದೊಳ್ ಬೆದರುತ್ತ ಭೀಮರಾಯನು ಬೇಗ ।
ಎತ್ತಿ ಕುಳ್ಳಿರಿಸಿಕೊಂಡು ॥

(ಭೀಮಕನು ವಿಚಾರ ತಿಳಿದು ಸಂತೈಸಿ ಸುದೇವನನ್ನು ಕರೆದು)

ರಾಗ – ಮಧ್ಯಮಾವತಿ – ಏಕತಾಳ

ಪದ್ಯ : ಮರುಗುತ್ತ ಮನದಿ ಚಿಂತಿಸುತವನಿಪನು ।
ಕರೆದು ತನ್ನಯ ಪುರೋಹಿತ ಸುದೇವನನು ।
ಹರಿಯದಿನ್ನೋರ್ವರೊಳ್ ದಯವಿಟ್ಟು ನೀವು ।
ತರಳೆ ಎಲ್ಲಿರುವಳೆನ್ನುವ ನಿಧಾನವನು ॥

(ಸುದೇವನು ಹುಡುಕಲು ತೆರಳುವನು)

ರಾಗ – ಸೌರಾಷ್ಟ್ರ – ರೂಪಕತಾಳ

ಪದ್ಯ : ಪೃಥ್ವಿದೇವನು । ಅಖಿಲ ರಾಜ್ಯವ ।
ಸುತ್ತಿ ದಣಿಯಲು । ಚದುರೆ । ಸಿಕ್ಕದಾದಳು ॥
ಚಿತ್ತದೊಳಗೆ ತಾ । ಳುತ್ತ ದುಗುಡವ ।
ಮತ್ತೆ ಹೊಕ್ಕನು । ಚೈದ್ಯನಗರವ ॥
ಭರದಿ ರಾಜಮಂದಿರಕೆ ತೆರಳಿದ ।

ರಾಜ : ಧರಣಿಪತಿಯು ತಾ ನೋಡಿ ಎರಗಿದ ।
ವಿನಯದಿಂದಲೀ ಒಯ್ದು ಮನ್ನಿಸಿ ।
ಇನಿಯಳ ಜತೆಗೊಂಡು ಪೂಜಿಸಿ ॥

ರಾಗ – ನೀಲಾಂಬರಿ – ರೂಪಕತಾಳ

ಹಣ್ಣುಹಂಪಲು । ತರಲು ಸಖಿಯುಳು ।
ಕಣ್ಣಮುಂದಕೆ । ಇರಿಸಿದಾಗಲೆ ॥
ಕನ್ನೆ ಮುಖವನು । ಸುದೇವ ನೋಡಿದ ॥
ತನ್ನ ರಾಯನ । ತನುಜೆಯೆಂಬುದ ॥
ಧರಣಿಪಾಲನ । ಸತಿಯು ಕರೆವುತ ।
ಸ್ಮರಿಸಿ ಕೇಳ್ದನು । ಯಾರೀಕೆ ಎನುತಲಿ ॥
ರಾಣಿ : ಒಡಲ ಹೊರೆಯಲು । ಬಂದ ನಾರಿಯು ॥
ಕಡು ಪತಿವ್ರತೆ । ಸಾಧುಗುಣಯುತೆ ॥

ರಾಗ – ಹಿಂದೋಳ – ರೂಪಕತಾಳ

ಸುದೇವ : ಪರದೇಶಿಯಲ್ಲಿವಳು ನಿನಗೆ ಅಕ್ಕನ ಮಗಳು ।
ಪರಮ ಮಂಗಲೆಯಾದ
ದಮಯಂತಿ ನೋಡಾ ॥

ರಾಣಿ : ಸ್ಥಿರವಾಗಿ ಅರುಹು ನೀನಾರೆಂದು ಎನ್ನೊಡನೆ ।
ಮರೆಮಾಡಿದರೆ ನಿನ್ನ ಹಿರಿಯರ ಆಣೆ ॥

ರಾಗ – ಆನಂದಭೈರವಿ – ತ್ರಿವುಡೆತಾಳ

ಗುಟ್ಟು ಪೇಳದೆ ಕೊರಳ ಕೊಯ್ದೆಯ ।
ಅಷ್ಟಭಾಗ್ಯಳೆ ಸೇವೆಯಿಂದಲಿ ।
ಕಷ್ಟಬಡಿಸಿದೆನೆಂದು ಗೋಳಿಟ್ಟಾಗ ತಬ್ಬಿದಳು ॥

ಚೈದ್ಯರಾಜ : ಪಟ್ಟದರಸನು ಇದನು ಕಂಡನು ।
ಥಟ್ಟನೈತಂದಬಲೆಗೆಂದನು ।
ಇಷ್ಟು ವಂಚನೆ ಮಾಡಬಹುದೇ ಪರರೆ ನಾವ್ ನಿನಗೆ ॥

(ಸುದೇವನು ದಮಯಂತಿಯನ್ನು ಭೀಮಕನಲ್ಲಿಗೆ ಕರೆತರುವನು)

ರಾಗ – ಮೋಹನ – ರೂಪಕತಾಳ

ಪದ್ಯ : ಸಿಂಧೂರಗಮನೆ ಅಂದಣವನಿಳಿದು ತಾಯಿ
ತಂದೆಯರಡಿಗೆ ಶೋಕದೊಳು ॥
ವಂದಿಸಿ ತನ್ನ ವಿಧಿಗಳಪ್ಪಾದುದು ಎನಲು ।
ನೊಂದುಕೊಂಡವರು ತಳ್ಕಿಸುತಾ ॥

ಭೀಮಕ : ಕಡು ಮುದ್ದುಮಗಳೆ ನೀ ದುಗುಡಗೊಳ್ಳಲು ಬೇಡ ।
ಪೊಡವಿ ಮೂರರೊಳು ನಿನ್ನಯ ರಮಣ ॥
ಅಡಗಿಕೊಂಡಿರ್ದರು ಹುಡುಕಿಸುವೆನುಯೆಂದು ।
ತೊಡೆದರು ಕಣ್ಣೀರ ವಿಪುಲ ॥

ರಾಗ – ಧನಶ್ರೀ – ಏಕತಾಳ

ಸುದೇವ : ಚಿಂತಿಸಬೇಡಯ್ಯ । ನೃಪತಿ ।
ಸಂತಸ ತಾಳಯ್ಯ ॥

ಪಿಂತೆಯೆ ಬರೆದಿಹ ಲಿಪಿಯುಂತಹುದು ॥
ಕಾಂತೆಯು ಪುಣ್ಯಕೆಚ್ಯುತಿ ಬರಲರಿದು ।
ಈಗಲೆ ಹೊರಟೆನು ಶೋಧನಕಾರ್ಯಕೆ ॥
ಬೇಗದಿ ತರುವೆನು ಮುಂದಣ ಒಸಗೆ ॥
ಪರಿಕಿಸುವೆನೆಂದು ಹೊರಟು ತರತರನ ರಾಜ್ಯಗಳನು ।
ಚರಿಸಿ ಬಂದನಯೋಧ್ಯಾ ನಗರಕೆ ।
ಸಂತಸದಿಂದಲೀ ॥

ರಾಗ ಹಂಸಧ್ವನಿ – ಏಕತಾಳ

ಋತುಪರ್ಣ : ಭರದಿ ಬರುವ ವಿಪ್ರನನ್ನು ।
ದೊರೆಯು ಕಂಡು ಎದ್ದು ನಿಂತು ।
ಅರರೆ ಇದುವೆ ಭಾಗ್ಯ ಭಾಗ್ಯ ಬನ್ನಿರೆಂದನು ॥
ಕರೆದುತಂದು ಕುಳಿಸಿ ಸನಿಯ ।
ಪರಮಸೇವೆ ಸಲಿಸಿ ಬಳಿಕ ।
ಧರಣಿಪಾಲನವನ ಹಸಿವೆ ತಣಿಸಲೆಳಸಿದಾ ॥
ಸುದೇವ : ದೊರೆಯೆ ನಿನ್ನೀ ಔತಣಕ್ಕೆ ।
ಸರಿಯು ಕಾಣೆ ಜಗದೊಳೆಲ್ಲು ।
ಅರರೆ ಯಾರೀ ಬಾಣಸಿಗನು ಅರುಹಬೇಹುದು ॥
ಋತುಪರ್ಣ : ಹಿಂದೆ ನಳನ ಸೌಧದಲ್ಲಿ ।
ಚಂದದಿಂದ ಅಡುಗೆ ಅಟ್ಟ ।
ಮಂದಭಾಗ್ಯ ಬಾಹುಕನು ಅಚ್ಚರಿಯೇನೊ ॥
ಸುದೇವ : ಪೋಗಿ ಬರುವೆ ಭೂಲಲಾಮ ।
ಭೋಗಭಾಗ್ಯಶಾಲಿಯಾಗು ।
ಬೇಗ ನಿನ್ನ ಕಾಂಬ ಯೋಗ ಸಿಗುವಂತಾಗಲಿ ॥

(ಸುದೇವ ಮರಳಿ ಭೀಮಕನೆಡೆಗೆ ಬಂದು ವಿಚಾರ ತಿಳಿಸುವುದು)

ರಾಗ – ಮೋಹನ – ಅಷ್ಟತಾಳ

ಸುದೇವ : ಆದರ ಮೇಲಯೋಧ್ಯಾಪುರ ಪೊಕ್ಕೆನು । ಕೇಳಿ ನೀವು ॥
ಮುದದೊಳಗಾ ಋತುಪರ್ಣ ಮನ್ನಿಸಿದನು । ಕೇಳಿ ನೀವು ॥
ನಳನಲ್ಲಿ ಹಿಂದೆ ಸಾವಿರ ಕುದುರೆಗೆ ಆತ । ಕೇಳಿ ನೀವು ॥
ದಳವಾಯಿಯಂತೆ ಬಾಹುಕನೆಂಬ ಪೆಸರಂತೆ । ಕೇಳಿ ನೀವು ॥
ಅಬ್ಬಬ್ಬ ಕಪ್ಪು ಮೈ ಸಂದೆಲ್ಲ ಡೊಂಕುಗಳ್ ॥ ಕೇಳಿ ನೀ ವು ॥
ಇಳೆಯೊಳು ಜೋಡಿಲ್ಲ ಪಾಕಗೈವುದರೊಳು ॥ ಕೇಳಿ ನೀವು॥
ಎನಗೆ ಸಂಶಯವಾದುದವರ ಮಾತಿನ ಮೇಲೆ ॥ ಕೇಳಿ ನೀವು ॥
ಘನ ಚಿಹ್ನೆಗಳ ನೋಡೆ ನಳನಂತೆ ತೋರ್ಪುದು ॥ ಕೇಳಿ ನೀವು॥

ರಾಗ – ಭೈರವಿ – ಝಂಪೆತಾಳ

ಭೀಮಕ : ಧರಣಿದೇವನ ನುಡಿಗೆ ಅರಸನಾಲೋಚಿಸುತ ।
ತರಳೆ ಮುಖವೀಕ್ಷಿಸಲು ಒರೆದಳಯ್ಯಂಗೆ ॥
ದಮಯಂತಿ : ತಾತ ಕೇಳ್ ಸಂಶಯಗಳೇತಕವನೊಡನೀರ್ದ ।
ಖ್ಯಾತನೇ ನಳನೆನ್ನ ಪ್ರೀತ ನಿಶ್ಚಯವು ॥

ರಾಗ – ಕಲ್ಯಾಣಿ – ಅಷ್ಟತಾಳ

ದಮಯಂತಿ : ಒರೆವೆಯುಕ್ತಿಯನೊಂದ ।
ಬರೆಸು ಓಲೆಗಳ್ ಚಂದ ।
ಮರುಮದುವೆಯಾಪಳು ದಮಯಂತಿ ಎಂದು ॥
ಪರಮ ವಿಕ್ರಮಿಗಳು ।
ಬರಲಿ ಶೌರ್ಯವ ಮೆರೆಸೆ ।
ಎರೆವೆ ಧಾರೆಯನೆಂದು ಸಾರು ಸಾರು ॥
ಸುದೇವ : ಭಳಿರೇ ಎಂದನು ವಿಪ್ರ ।

ಭೀಮಕ : ಭಲರೇ ಎಂದನು ರಾಯ ।
ಹೊಳೆದ ಯುಕ್ತಿಯ ಮೆಚ್ಚಿ ನೆಚ್ಚಿದ ॥
ಭೀಮಕ : ಒರೆದನು ಭೀಮಕ ।
ಸುದೇವ : ಬರೆದನು ಸುದೇವ ।
ಕರೆಸುತಲಟ್ಟಿದ ದೂತನನು ॥

(ಚಾರಕನನ್ನು ಓಲೆಸಹಿತ ಋತುಪರ್ಣನಲ್ಲಿಗೆ ಕಳುಹಿಸಿದರು)

ರಾಗ – ಹುಸೇನಿ – ಏಕತಾಳ

ಚಾರಕ : ಸಲಾಮು ತೆಕ್ಕೊ ಋತುಪರ್ಣರಾಯ ।
ಸಲಾಮು ಲಾಲಿಸು ಜೀಯ ।
ಸಲಾಮು ಮಾಳ್ಪೆವು ಪಾದಾರವಿಂದಕೆ ।
ವಿಳಾಸದಾರರು ನೀವಿದಕೆ ॥
ಕುಂಡಿನಪುರದ ಭೀಮಕರಾಯರು ।
ದಂಡಿಗೆಯೋಗವ ಬರಿಸುವರು ।
ಕಂಡೀಚಣಕೆ ಹೊರಟೇಬಿಟ್ಟರೆ ।
ಖಂಡಿತ ಕೊರಳಿಗೆ ಮಾಲೆಯಿದು ॥

ರಾಗ – ಹಂಸಧ್ವನಿ – ತ್ರಿವುಡೆತಾಳ

ಋತುಪರ್ಣ : ಏನಿದೇನಿದು ಹಮ್ಮು ಬಿಂಕವು ।
ಮಾನವಂತೆಗೆ ಎರಡು ಮದುವೆಯೆ ।
ಹೀನತನದಲಿ ನಡೆವ ನೀಚನ ಬರಿದೆ ಬಿಡಲಾರೆ ॥
ಬರೆದ ಲಗ್ನವ ನೋಡೆ ಅರೆದಿನ
ಹೊರತು ಜಾಪ್ಯಗಳಿಲ್ಲವೆನುತಲಿ ।
ಕೊರಗಿ ಮಿಡುಕುತಲಿರಲು ಬಾಹುಕನೊರೆದನಾಗ ॥

ರಾಗ – ನವರೋಜು – ಆದಿತಾಳ

ಬಾಹುಕ : ಧರಣೀವಲ್ಲಭ ಕೇಳು । ಇಲ್ಲಿ ।
ಬರಿದೆ ನೀ ಕ್ರೋಧದೊಳು ॥
ನೆರೆದಿಹ ಸಭೆಯಲಿ ಕಂಪಿಸಿ ಕೂಗಲು ।
ಬರುವ ಫಲಗಳೇನರುಹು ಕೃಪಾಳು ॥
ಛಲಗಳಿದ್ದರೆ ನಿನಗೆ । ನಾಳೆ ।
ಘಳಿಗೆ ಐದರ ಒಳಗೆ ॥
ನಿಲಿಸುವೆ ತವ ರಥ ಕುಂಡಿನನಗರದಿ ।
ಸಲಿಸಿಕೊ ಕದನದ ತುರಿಕೆಯ ಮುದದಿ ॥
(ನಳಬಾಹುಕರು ರಥದಲ್ಲಿ ಪಯಣಿಸುವರು)
(ವೇಗಕ್ಕೆ ರಾಯನ ಕರದ ವಸ್ತ್ರ ಬೀಳುವುದು)

ರಾಗ – ಶಂಕರಾಭರಣ – ಏಕತಾಳ

ಋತುಪರ್ಣ : ಸಾರಥಿಯೆ ತಾಳು ತಾಳು ಜಾರಿಹೋಯ್ತು ಕರದ ವಸ್ತ್ರ ।
ಭೂರಿರಥವ ನಿಲಿಸು ಎಂಬೆ । ತರಲು ಪೋಗುವೆ ॥
ಬಾಹುಕ : ಮರುಳು ದೊರೆಯೆ । ಕರದ ವಸನ ।
ಆರರೆ ಸಿಗದು ಸಿಗದು ಇನ್ನು ।
ಸಾರಿ ಬಂದೆವೀಗ ನಾವರುವತ್ತು ಯೋಜನ ॥
ಋತುಪರ್ಣ : ಸತ್ಯವಿಹುದೇ ನಿನ್ನೀ ನುಡಿಯು ।
ಬಾಹುಕ : ಮಿಥ್ಯವಾಡೆ ಕೇಳು ದೊರೆಯೆ ॥
ಋತುಪರ್ಣ : ಹತ್ಯಗೈದೆ ಎನ್ನ ಮಾನ ।
ಬಾಹುಕ : ಪಥ್ಯವಲ್ಲ ಇದು ದುಮ್ಮಾನ ॥
ಋತುಪರ್ಣ : ಯಾರು ನೀನು ಪೇಳು ಸತ್ಯ ।
ಬಾಹುಕು : ಯಾಕೆ ಅದುವೆ ಇಹೆನು ಭೃತ್ಯ ॥
ಋತುಪರ್ಣ : ಬಹಳ ದೈನ್ಯದಿಂದ ನಾನು । ಕೇಳಿದರು ಒಳಗ ನೀನು ।
ಪೇಳದಿರ್ದಮೇಲೆ ಪ್ರಾಣ ಕಳೆದುಕೊಂಬೆನು ॥

ಬಾಹುಕ : ಪರಮಮಿತ್ರ ತಾಳು ನುಡಿವೆ ।
ತರಳ ಬುದ್ಧಿ ಬೇಡವಯ್ಯ ।
ಅರಿತುಕೊಳೆಲೊ ನಾನೇ ನಳನು ಪರಮಪಾಪಿಯು ॥

ರಾಗ – ಆನಂದಭೈರವಿ – ಏಕತಾಳ

ಋತುಪರ್ಣ : ಧುರದೊಳಿದಿರು ನಿಲ್ವರಿಲ್ಲ ।
ಸಿರಿಯೊಳ್ ಸುರಪನಿಂದ ಮಿಗಿಲು ।
ಸ್ಮರನಾಕಾರವೆಲ್ಲ ಪೋದ । ಪರಿ ಇದೇನಯ್ಯ ॥
ಬಾಹುಕ : ದುರುಳ ಶನಿಯು ಪಿಡಿದು ಎನ್ನ ।
ಹರಿದು ತಿಂದು ಕಾಡಿ ದಣಿಸಿ ।
ನರಳಿಸುತ್ತ ತೊರೆಯಿಸಿದನು ಮಡದಿ ಮಕ್ಕಳ ॥
ಋತುಪರ್ಣ : ಇರಲಿ ಅವನಿಂದಾಪುದೇನು ।
ಭರದಿ ಶನಿಯ ಪೀಡೆ ತೊಲಗೆ ।
ಪರಮಮಂತ್ರವೊಂದ ಪೇಳ್ವೆ ತ್ವರೆಯೊಳೀಗಲೆ ॥
(ನಳನು ಧ್ಯಾನಿಸುತ್ತಿರುವಾಗ ಶನಿ ಪ್ರತ್ಯಕ್ಷನಾಗುತ್ತಾನೆ)

ರಾಗ – ಸಾವೇರಿ – ಅಷ್ಟತಾಳ

ಶನಿ : ನಳನ ರೌದ್ರಕೆ ಮನದಿ । ಮರುಗುತ್ತಲಾಗ ।
ಕಳವಳಿಸುತ ದೈನ್ಯದಿ ॥
ನಿಲದೆ ಕೈಮುಗಿದು ಗೋಳಿಡುತ ಬಿನ್ನೈಸಿದ ।
ಬಲು ಕೃಪಾನಿಧಿಯೆ ನೀ ತಲೆಗಾಯ್ದು ಸಲಹೆನ್ನ ॥

ಋತುಪರ್ಣ : ಶನಿಯ ಭಿಕ್ಷೆಗೆ ತಕ್ಷಣ । ನೀ ಪೋಗಬೇಡ ।
ವಿನಯದೊಳಿರು ಸದ್ಯಕೆ ॥
(ಶನಿ ನಿರ್ಗಮನ. ನಳ ಋತುಪರ್ಣರು ಕುಂಡಿನನಗರಿಗೆ ತೆರಳುತ್ತಾರೆ.)
(ಭೀಮಕನ ಅರಮನೆಯಲ್ಲಿ)

ರಾಗ – ಹರಿಕಾಂಬೋಧಿ – ಅಷ್ಟತಾಳ

ಬರಲು ಭೂವರರೆಲ್ಲ । ಕುಂಡಿನನಗರಕೆ ।
ಬೆರಗಿನಿಂ ಸ್ವಾಗತಿಸೆ ॥
ಬಂದನು ಋತುಪರ್ಣ ಬಾಹುಕನೊಡಗೂಡಿ ।
ಒಂದರೆಘಳಿಗೆಯಲಿ ॥
ಮುಂದಾಗಿ ಭೀಮಕ ಸ್ವಾಗತವೀಯುತೆ ।
ಬಂಧುವೆ ಬಾಯೆಂದನು ॥
ಅಂದು ಬಂದವರಲ್ಲಿ ಬಾಹುಕನಿರುವುದ ।
ಸುಂದರಿ ದಮಯಂತಿಯು ॥
ಬೆಂದ ಮನದಿ ತಾನು । ಸುದೇವನನು ಅಟ್ಟಿ ।
ಚಂದದಿ ಕರೆಸಿದಳು ॥

ರಾಗ – ಕಾಂಬೋಧಿ – ಝಂಪೆತಾಳ

ದಮಯಂತಿ : ಧೀರ ನೀನಾರು ತವ ಊರಾವುದು ॥
ಯಾರ ಚಾರಕ ನೀನು ನಾಮವೇನುಸುರು ॥

ಬಾಹುಕ : ಮೆರೆವ ವರ ವಂಗದೇಶವದೆನಗೆ ಪೂರ್ವದಲಿ ।
ವರ ಬಾಹುಕನು ಎಂಬ ಪೆಸರು ಕೇಳು ॥
ಬರೆದ ವಿಧಿವಶದಿಂದ ದಾರಿದ್ರ್ಯಸಂಭವಿಸೆ ।
ಇರುವೆ ಋತುಪರ್ಣನೊಳು ಪಾಕವೃತ್ತಿಯಲಿ ॥

ದಮಯಂತಿ : ಆಗಲಾಗಲಿ ಸಾಕು ಕೇಳೆನ್ನ ಮಾತೊಂದ ।
ಈಗ ನಿನ್ನಲಿ ಮೋಹ ಮುಸುಕಿರ್ಪುದು ॥
ಹೇಗೆ ನಿನ್ನಭಿಮತವು ವಂಚಿಸದೆ ಪೇಳೆನಗೆ ।
ಯೋಗಿ ನೀನಲ್ಲದಿರೆ ಒಲಿದು ವರಿಸುವೆಯ ॥

ರಾಗ – ಖಮಾಚು – ರೂಪಕತಾಳ

ಬಾಹುಕ : ತರುಣಿ ಯಾಕೆ ಈ ಮೋಹವೆನ್ನೊಳು ॥
ತಿರುಕರಿಂದತಿ ತಿರುಕ ಜಗದೊಳು ॥
ಮೊದಲ ಸತಿಯನೆ ಹೊರೆಯಲಾರದೆ ।
ಹದನಗೆಟ್ಟು ದೇಶಾಂತ ತಿರುಗಿದೆ ॥
ದಮಯಂತಿ : ನೋಡಲಾರೆ ನಾ ಕೈಯ ಮುಗಿವೆನು ।
ಬೇಡಿಕೊಂಬೆನು ತ್ಯಜಿಸು ಸೋಗನು ॥
ಕಾಡುಮೇಡನು ಸುತ್ತಿ ಬಂದೆನು ।
ಪಾಡುಪಟ್ಟೆನು ನಿನ್ನ ಕಾಯ್ದೆನು ॥

ರಾಗ – ಪೂರ್ವಿ-ವಾರ್ಧಕ್ಯ

ನಾರಿಯಾಡಿದ ನುಡಿಗೆ ಭೂರಿತಾಪಗಳಿಂದ ।
ಧಾರಿಣಿಪ ಹೂಂಕರಿಸೆ ಕ್ರೂರ ಶನಿ ಕಳಚಿದನು ।
ಭೋರನೆರಗುತ ಸರಿಯೆ ಆ ನಳಂ ರಂಜಿಸಿದ
ವಾರಿಜಾಪ್ತನ ತೇಜದಿ ॥

ರಾಗ – ಬಿಲಹರಿ – ಆದಿತಾಳ

ಹರುಷದೊಳೋಲಾಡೇ । ವಿರಹಿಗಳ್ ।
ಸರಸದಿ ನಲಿದಾಡೇ ॥
ಪರಿಪರಿ ಕಾಡಿದ ಆ ಶನಿ ತೊಲಗಲು
ಸಿರಿವರ ನಳನನು ಸಾರಿದಳಾ ಸತಿ ॥

(ಎಲ್ಲರೂ ಸೇರಿ ನಳದಮಯಂತಿಯರ ಪುನರ್ಮಿಲನದಲ್ಲಿ ಪಾಲ್ಗೊಂಡು ಸಂತೋಷಿಸುವರು.)

ಮಂಗಲಂ

ರಾಗ – ಧವಳಾರ – ಏಕತಾಳ

ಬತ್ತಲೆ ನಿಂತಿಹ ಬುದ್ಧನಿಗೇ ।
ಉತ್ತಮ ಹಯವೇರಿದ ಕಲ್ಕ್ಯನಿಗೇ ॥
ಹತ್ತವತಾರದಿ ಭಕ್ತರ ಸಲಹುವ
ಅಚ್ಯುತ ಪುರಂದರವಿಠಲನಿಗೇ ॥
ಮಂಗಲಂ ಶುಭ ಮಂಗಲಂ ॥

ಕನಕಾಂಗಿ ಕಲ್ಯಾಣ

ಪ್ರಸಂಗಕರ್ತ :

ನಿತ್ಯಾನಂದ ಅವಧೂತ

ಸಂಪಾದಕ :

ಭಾಗವತ ನೀಲಾವರ ರಾಮಕೃಷ್ಣಯ್ಯ

ಯಕ್ಷಗಾನ ಕೇಂದ್ರ, ಉಡುಪಿ – 576102

ಕನಕಾಂಗಿ ಕಲ್ಯಾಣ

ರಾಗ – ನಾಟಿ – ತ್ರಿಪುಟತಾಳ

ಪ್ರಾರ್ಥನೆ : ಗಜಮುಖದವಗೆ ಗಣಪಂಗೆ ॥
ತ್ರಿಜಗವಂದಿತಗಾರತಿ ಎತ್ತಿರೇ ॥ ಪಲ್ಲ ॥
ಒಳ್ಳಿತದವಲು ತೆಂಗಿನಕಾಯಿ ಕಡಲೆಯು
ಎಳ್ಳುಂಡಾನಿಗೆ ಕಬ್ಬು ಮೆಲುವವಗೇ ॥
ಬೆಳ್ಳಿಯ ಉಲಿಗೆಜ್ಜೆಗಳ ಕಟ್ಟಿ ಕುಣಿವಂಥ
ಡೊಳ್ಳಿನ ಗಣಪಗಾರತಿ ಎತ್ತಿರೇ ॥ ೧ ॥
ದೇವತೆಗಳ ಕೈಯ ಕಪ್ಪವ ಕೊಂಬಗೆ
ದಾವಾಗ್ನಿಯಂದದಿ ಮೆಲುವವಗೇ ॥
ಆವಾಗ ಮನದಲ್ಲಿ ನೆನೆದ ಇಷ್ಟಾರ್ಥವ
ನೀವ ಗಣೇಶಗಾರತಿ ಎತ್ತಿರೇ ॥ ೨ ॥

(ಬಲರಾಮನ ಒಡ್ಡೋಲಗದಲ್ಲಿರುವಾಗ ಸುಭದ್ರೆಯ ಪ್ರವೇಶ)

ರಾಗ – ದೇವಗಾಂಧಾರಿ – ಅಷ್ಟತಾಳ

ಸುಭದ್ರೆ : ಅಣ್ಣ ಚಿಂತಿಪುದೇಕೆ ಸುಮ್ಮನೆ ನೀನೆನ್ನ ।
ಚಿಣ್ಣನಾದಭಿಮನ್ಯುಗೆ ॥
ಕನ್ನೆ ಕನಕಾಂಗಿಯ ಕೊಡುವುದು ಹಿತವಲ್ತೆ ।
ಗಣ್ಯನೆ ತಿಳಿದು ನೋಡು ॥

ಬಲರಾಮ : ತಿಳಿದೆನು ಕಾಣವ್ವ ತಂಗಿ ನಿನ್ನಯ ಮುದ್ದು ।
ತರಳನಾದಭಿಮನ್ಯುಗೇ ॥
ಚಲುವಿಸಿ ಕೊಡುವವನಲ್ಲವು ಸುತೆಯನ್ನು ।
ನಳಿನಾಕ್ಷಿ ತಿಳಿದಿರಲಿ ॥

ಸುಭದ್ರೆ : ಸೋದರಿಕೆಗೆ ಸುತೆಯನು ಕೊಡದಾರಿಗೆ ।
ನೀ ಧಾರೆಯೆರೆವೆಯಣ್ಣ ॥
ಮೇದಿನಿಯೊಳಗತಿ ಚೋದ್ಯವಾಗಿದೆ ಮತ್ತೆ ।
ಯಾದವಾಗ್ರಣಿಯ ರೀತಿ ॥

ಬಲರಾಮ : ಸುತೆಯನ್ನು ಪಡೆದವಗಷ್ಟೊಂದು ತಿಳಿಯದೆ
ಅತಿ ಯೋಗ್ಯ ವರನಿಹನು ॥
ಹಿತವಂತ ಕೌರವರಾಯನ ಸುಕುಮಾರ ।
ಸುತನು ಸುಲಕ್ಷಣನು ॥

(ಸುಭದ್ರೆ ನಿರಾಸೆಯಿಂದ ಕೃಷ್ಣನಲ್ಲಿಗೆ ಬರುತ್ತಾಳೆ)

ಕೃಷ್ಣನ ಒಡ್ಡೋಲಗ

ರಾಗ – ನವರೋಜು – ಆದಿತಾಳ

ಬಂದನು ದೇವರದೇವ । ಬೆಂ ।
ಬಿಡದೆ ಭಕ್ತರ ಕಾವ ॥
ಚಂದ್ರಕೋಟಿಪ್ರಕಾಶ ಚಾರುತರ ವಿಲಾಸ ।
ಇಂದ್ರನಂದನನ ಭಾವ ಕರುಣಸಂಜೀವ ॥

ರಾಗ – ತೋಡಿ – ರೂಪಕತಾಳ

ಸುಭದ್ರೆ : ಬಂದಳು ಮುರವೈರಿಯೆಡೆಗೆ ಮಾತಾಡದೆ ।
ಮಂದಗಮನದಿಂದಲಾಗ ॥

ಕೃಷ್ಣ : ಕಾಣುತ್ತ ಕಾಮನಯ್ಯನು ಕಿರಿ ತಂಗಿಯು ।
ಏನಮ್ಮ ಮಾತಾಡದೀಗ ॥
ಜಾಣುವೆಯುಳಿದು ನಿಂದಿರ್ಪೆ ಯಾಕೆಂದು ಗೀ ।
ರ್ವಾಣವಂದಿತ ನುಡಿಸಿದನು ॥

ರಾಗ – ಶಂಕರಾಭರಣ – ಅಷ್ಟತಾಳ

ಸುಭದ್ರೆ : ದೇವ ಲಾಲಿಸಯ್ಯ । ಅಗ್ರಜ ವಾಸು ।
ದೇವ ಲಾಲಿಸಯ್ಯ ॥
ದೇವ ಲಾಲಿಸು ಭಕ್ತಾವಳಿಗಳನೆಲ್ಲ ।
ಕಾವ ಮಹಾನುಭಾವ । ಸಜೀವ ॥
ಸಾತಿಶಯಗಳಿಂದ । ಬಲರಾಮ ತಾ ।
ನೋತು ಕರುಣದಿಂದ ॥
ಖ್ಯಾತಿಯಿಂ ಕೌರವನನುಜಗೆ ಕುವರಿಯ ।
ಪ್ರೀತಿಯೊಳೀವನಂತೆ । ತಾ ಮತ್ತೆ ॥
ಚಾರುವರಿದು ನಾನು । ಎನ್ನಯ ಸುಕು ।
ಮಾರನಿಗೀಯೆಂದೆನು ॥
ಸಾರುಸಾರೆನುತ ವಿಚಾರಿಸದೀ ಮಾತ ।
ಮೀರಿದ ಸೋದರನು । ನಿನ್ನಣ್ಣನು ॥

ರಾಗ – ಕಲ್ಯಾಣಿ – ಭಾಮಿನಿ

ಕೃಷ್ಣ : ಎಂದನುಜೆಯಾನನವನೀಕ್ಷಿಸಿ ।
ಮಂದಹಾಸದಿ ಮಧುರವಚನಗ ।
ಳಿಂದ ತಾನಿಂತೆಂದನಾ ಗೋವಿಂದನನುನಯದಿ ॥
ಕುಂದಕುಟ್ಮಲರದನೆ ಕೇಳೌ ।
ತಂದುಕೊಳಲೇಕಿನಿತು ಚಿಂತೆಯ ।
ಮುಂದೆ ವಿಧಿ ಬರೆದಂತೆ ಆಪುದು ತೆರಳು ಸಂತಸದಿ ॥

(ನಿರ್ಗಮನ – ಇತ್ತ ಕೌರವರ ಒಡ್ಡೋಲಗ)

ರಾಗ – ತೋಡಿ – ಆದಿತಾಳ

ಬಂದಾ । ಕೌರವರಾಯನಾಗ । ಸಂತೋಷದಿಂದ ॥
ಬಂದ ಕೌರವರಾಯನಾಗ ॥

(ಬಲರಾಮನ ಬರುವಿಕೆ)

ರಾಗ – ಘಂಟಾರವ – ತ್ರಿವುಡೆತಾಳ

ಬಂದನಾ ಗಜಪುರಕೆ ಹಲಧರ ।
ನೆಂದು ಸಂತಸದಿಂದ ಕೇಳ್ದಾ ।
ನಂದದಿಂ ಕೌರವನು ತಾ ನಡೆತಂದು ಬೇಗ ॥

ಕೌರವ : ಇದಿರುಗೊಂಡೆರಗುತ್ತ ತನ್ನಯ ।
ಸದನಕೊಡಗೊಂಡೊಯ್ದು ಮನ್ನಿಸಿ ।
ವಿಧವಿಧದೊಳುಪಚರಿಸಿ ಸಮ್ಮೃದಗೊಳಿಸುತಾಗ ॥

ರಾಗ – ಮಧ್ಯಮಾವತಿ – ತ್ರಿಪುಟತಾಳ

ಕೇಳಿದನು ಕುಶಲಾದಿಗಳ ವರ ।
ನೀಲಮೇಘಶ್ಯಾಮನರಸಿಯು ।
ರೋಳಿಗಳು ಸುಕ್ಷೇಮವೇನೈ ಭೂಲಲಾಮ ॥

ರಾಗ – ಕಾಂಬೋಧಿ – ಝಂಪೆತಾಳ

ಬಲರಾಮ : ಕುಶಲಿಗಳು ನಾವು ಕೇಳ್ ಕೌರವೇಶ್ವರ ನಿನಗೆ ।
ಕುಶಲವೇ ಸರ್ವ ಬಳಗಕ್ಕೆ ॥
ಕುಶಲವೊಂದಿದೆ ಕೇಳು ಪೇಳ್ವೆ ನಾನತಿ ಜವದಿ ।
ಕುಶಲೋಪಮನ ದಯೆಯಿಂದ ॥

ಎನ್ನ ಮೋಹದ ಕನ್ನೆ ಕನಕಾಂಗಿಯನು ನಿನ್ನ ।
ಚಿಣ್ಣ ಲಕ್ಷಣನವಗೆ ಧಾರೆಯನ್ನೆರೆವೆ ॥
ಮುನ್ನ ಮೆರೆಸೈ ನೀನು ಸಕಲ ಸಂಭ್ರಮವನ್ನು ।
ಹೊನ್ನಾಗಲಿನ್ನೆಮ್ಮ ನಂಟುತನವು ॥

ರಾಗ – ಬಿಲಹರಿ – ಅಷ್ಟತಾಳ

ಕೌರವ : ಬಲುಚಂದವಾಯ್ತಯ್ಯ ಭಾವ । ನಿನ್ನ ।
ಒಲುಮೆಗಳೆನಗೆ ಸಂಜೀವ ॥
ಛಲದಂಕಮಲ್ಲ ನಿಶ್ಚಲದಿಂದಲಿ ಕುರು ।
ಕುಲವನುದ್ಧರಿಸಿದೆ ಬಲರಾಮದೇವ ॥
ಗೋಪಾಲಗಾ ಪಾಂಡುಸುತರು । ನಿ ।
ರ್ಲೇಪರತ್ಯಾಪ್ತರಾಗಿಹರು ॥
ಈ ಪರಿ ನಂಟಿಗೆ ಜಡಬಡುವನೆ ಕೃಷ್ಣ ।
ಹೇ ಪುಣ್ಯಚರಿತ ಪಾವನ ವಿಖ್ಯಾತ ॥

ರಾಗ – ಮಾರವಿ – ಏಕತಾಳ

ಬಲರಾಮ : ಯಾರಿಂದಾಪುದು ಏನು । ಕಾ ।
ಮಾರಿಯೆ ತಡೆಯಲಿ ತಾನು ॥
ಧಾರೆಯನೆರೆವೆನು ಸುತೆಯ । ಸುಕು ।
ಮಾರಲಕ್ಷಣಗೆ ಕೇಳ್ ರಾಯ ॥
ಇರುವುವು ಲಗ್ನಗಳೆರಡು । ಬಹ ।
ಷಷ್ಠಿಯು ದಶಮಿಯು ನೋಡು ॥
ಭರದಲಿ ನಡೆಯಿಸು ಕಾರ್ಯ । ಹಿರಿ ।
ಯರ ಹರಕೆಯು ಪಡೆ ಆರ್ಯ ॥

(ಇಬ್ಬರೂ ನಿರ್ಗಮಿಸುವರು)

(ಇತ್ತ ಸುಭದ್ರೆ ಭಾನುಮತಿ ಬಳಿ ಬರುವಳು)

ರಾಗ – ಭೈರವಿ – ತ್ರಿಪುಟತಾಳ

ಬಂದಳಾಗ । ಭಾವಕಿ । ಬಂದಳಾಗ ॥
ಬಂದಳಾ ಗಜಪುರಕೆ ಪದುಳಗ ।
ಳಿಂದ ಪಾರ್ಥನ ಕಿರಿಯರಸಿ ಮುದ ।
ದಿಂದ ಸಿಂಗರಗೊಂಡು ತಾನು । ಧಂ ಧಣಂ ಧಣರೆಂಬ ಚೆಲುಕಾ ।
ಲಂದುಗೆಯು ಗಾನದಲಿ ರಂಜಿಸಿ ॥ ಬಂದಳಾಗ ॥

ರಾಗ – ದೇವಗಾಂಧಾರಿ – ಏಕತಾಳ

ಭಾನುಮತಿ ಬಂದೆಯಾ ಸೌಭದ್ರೆ ಇಂದು ನೀನಪರೂಪ ।
ಬಂದುದು ಚೆಲುವಾಯ್ತು ಕೇಳೇ ॥
ಚಂದವೆ ಪತಿದೇವ ಭಾವಂದಿರೆಲ್ಲ ಆ ।
ನಂದದೊಳಿರುವರೆ ಪೇಳೆ ॥
ಸುಭದ್ರೆ : ಚಂದವು ಚಂದವು ಚಂದದೊಳೆಲ್ಲರಾ ।
ನಂದದೊಳಿರುವರು ಕೇಳೇ ॥
ಭಾನು ಮತಿ : ಚಂದದ ವಾರ್ತೆಯು ಕಾದಿದೆ ನಿನಗೊಂದು ।
ಮಂದಗಮನೆ ತಂಗಿ ಕೇಳೇ ॥
ಕಂದ ಲಕ್ಷಣನಿಗೆ ಬಂದು ಬಲಭದ್ರನು ।
ಸುಂದರಿ ಸುತೆಯುನ್ನು ಈವ ॥
ಸುಭದ್ರೆ : ಹೇಳಲಿಲ್ಲಣ್ಣನು ಕೇಳಲಿಲ್ಲೆನ್ನನು ।
ಹೇಳುವ ಸುದ್ದಿಯು ನಿಜವೇನೆ ॥
ಆಗಲಾಗಲಿ ಲಗ್ನ ಬಾರದಿರಲಿ ವಿಘ್ನ ।
ಪೋಗಲೆ ನಾನೆನ್ನ ಮನೆಗೆ ॥

ರಾಗ – ಆನಂದಭೈರವಿ – ಭಾಮಿನಿ

ಸುಭದ್ರೆ : ಅಂದು ಕೇಳಿದ ವಾರ್ತೆಯಿಂದಲಿ ।
ನೊಂದು ಮನದಲಿ ಚಿಂತಿಸುತ ಭರ ।

ದಿಂದ ಮನೆಗೈವುತ್ತ ಮಾತುಗಳಾಡದೋರ್ವರಲಿ ॥
ಕಂದಿದಾನನ ಕಾಂತಿಯಲಿ ಕಳೆ ।
ಗುಂದಿ ಅಳುತಳುತಾಗ ಸಜ್ಜೆಯ ।
ಮಂದಿರದಿ ಪವಡಿಸಿದಳಾ ಸೌಭದ್ರೆ ಅತಿ ಖಿನ್ನೆ ॥

(ಅಭಿಮನ್ಯು ಪ್ರವೇಶ)

ರಾಗ – ಮೋಹನ – ಅಷ್ಟತಾಳ

ಅಭಿಮನ್ಯು : ತಾಯೆ ಚಿಂತಿಪುದೇನು । ಪೇಳೆನ್ನೊಳು ।
ಮಾಯವಿದರೊಳೇನು ॥
ತೋಯಜಮುಖಿ ಸುಪ್ರಿಯದೊಳೇಳು ಇ ।
ನ್ನಾಯಾಸಗಳನುಳಿದು ॥
ಯಾರೇನೆಂದರಮ್ಮ । ನಿಮ್ಮನು ಮತ್ತೆ ।
ಯಾರು ನಿಂದಿಸಿದರಮ್ಮ ॥
ಈ ರೀತಿಯಲಿ ಬರಿ ಮೋರೆ ಮುಸುಕನಿಟ್ಟು ।
ಸಾರಿ ತಳೆವರೆ ಮೌನವ ॥

ರಾಗ – ಆನಂದಭೈರವಿ – ಏಕತಾಳ

ಸುಭದ್ರೆ : ಏನ ಹೇಳಲಯ್ಯೋ ನಿನಗೆ ಕಂದ ।ಕಂದ । ಎನ್ನ ।
ಮಾನಹಾನಿಯನ್ನು ಪೇಳ್ವೆ ಕಂದ । ಕಂದ ॥
ಹಲಧರನು ತನ್ನ ಮಗಳ ಕುರು
ಕುಲದ ಲಕ್ಷಣಂಗೆ । ಗೆಲವಿನಿಂದಲೀವನಂತೆ ।
ಕಂದ ಕಂದ । ಅವನ ।
ಛಲಕೆ ನಾನು ಮಾಡಲೇನು ಕಂದ । ಕಂದ ॥

ರಾಗ – ಖಮಾಚು – ಅಷ್ಟತಾಳ

ಅಭಿಮನ್ಯು : ದೂರುವುದಾರನು ತಾಯೆ ಅನ್ಯತ್ರವು ।
ವಾರಿಜಾಂಬಕನಿರಲು ॥
ಬೇರೋರ್ವರು ಇದ ಹರಿಸುವರೇ ಮದ ।
ನಾರಿಯು ತಾ ತಿಳಿಯ ॥
ಬಿಡುಬಿಡು ಕುರುಬಾಯ್ಬಡುಕನ ಮಗನಿಗೆ ।
ಸಡಗರದಲಿ ಸುತೆಯು ।
ಕೊಡಲೀಸೆನು ನಾ ಬಿಡಲಾರೆನೆಂದೆಂದು ।
ಬಡಿವಾರಗಳಿರಲಿ ॥

ರಾಗ – ಪಂಚಾಗತಿ – ರೂಪಕತಾಳ

ಪೊರಟ ತಾಯ ಜತೆಗೆ ಸುತನು ರಥದಿ ತಕ್ಷಣ ॥
ವರ ಕುಮಾರ ನಡೆದನಾಗ ಅತಿ ವಿಚಕ್ಷಣ ॥
(ತಾಯಿ ಮಗ ರಥವನ್ನೇರಿ ತೆರಳುವರು)
(ಮಾರ್ಗದಲ್ಲಿ ಘಟೋತ್ಕಚನ ಚಾರಕ ತಡೆಯುವನು)

ರಾಗ – ಮಾರವಿ – ಅಷ್ಟತಾಳ

ಚಾರಕ : ಎಲ್ಲಿಗೆ ಪೋಪೆಯೊ ಪೋರ । ತಡೆ ।
ಸಲ್ಲದು ಈ ರಾಜ್ಯ ಘೋರ ॥
ಇಲ್ಲಿಗೆ ಇಹನಯ್ಯ ದೊರೆಯು । ನಡೆ ।
ಖುಲ್ಲನೆ ಹೆಮ್ಮೆಯ ತೊರೆಯೊ ॥
ಅಭಿಮನ್ಯು : ತಡೆವರು ಯಾರೆನ್ನ ರಥವ । ಈಗ ।
ತಡೆದರೆ ಹೊಡೆವೆನು ತಲೆಯ ॥
ಬಡಿವಾರ ನಿಲ್ಲಿಸಿ ಸರಿಯೋ । ನಿನ್ನ ।
ಒಡೆಯ ತಾನಿದ್ದರೆ ಕರೆಯೊ ॥

(ಚಾರಕನು ಸೋತು, ಘಟೋತ್ಕಚನಿಗೆ ದೂರಲು ಬರುವನು)
(ಘಟೋತ್ಕಚನ ಒಡ್ಡೋಲಗ)

ರಾಗ – ಕುರಂಜಿ – ಆದಿತಾಳ

ಚಾರಕ : ಕೇಳು ಖಳಕುಲಶೀಲ ನೀನೊಲಿದು ॥
ಪೇಳಲು ಬಂದಿಹೆ ವಾರ್ತೆಯನೊಂದು ॥
ಚಿಣ್ಣನೋರ್ವನು ಒಂದು ಹೆಣ್ಣನು ಕೂಡಿಕೊಂಡು ॥
ಬಣ್ಣದ ರಥವನೇರಿ ತಿಣ್ಣ ಗರ್ವದಲಿ ॥
ಬಂದೆಮ್ಮ ವಿಪಿನಕೆ । ತಂದನು ಹಾನಿಯ ।
ನಿಂದಿರೆ ಕಾವಲು । ಬಂದೆಮ್ಮ ಹೊಡೆದ ॥

ರಾಗ – ಹಂಸಧ್ವನಿ – ಭಾಮಿನಿ

ಘಟೋತ್ಕಚ : ಚರರ ನುಡಿಯನು ಕೇಳ್ದು ಕಂಗಳೊ
ಳುರಿಯನುಗುಳುತ ಪ್ರಳಯಕಾಲದ ।
ಹರನ ಪರಿಯಂತುರಿದು ಎದ್ದನು ಸುಡುವ ಸಿಟ್ಟಿನಲಿ ॥

ರಾಗ – ಹಂಸಧ್ವನಿ – ಏಕತಾಳ

ಆರೆಲವೋ ನಿನ್ನಯ ಪೆಸರೇನ್
ಊರಾವುದು ನೀ ಯಾರ ಕುಮಾರ ।
ಯಾರೀ ನಾರಿಯು ಯಾಕೀ ವಿಪಿನಕೆ ।
ಘೋರನೆ ಬಂದಿರಿ ಪೇಳಿರೆಲಾ ॥
ಅಭಿಮನ್ಯು : ಆರಾದರೆ ನಾನಿನಗೇನಂತೆ
ದಾರಿಯ ತಡೆಯದಿರಯ್ಯ ।
ಕಾರ್ಯದಿ ಹೋಗುವ ಪಥಿಕರು ನಾವು ।
ಭಾರಿಯ ಗದ್ದಲ ಬೇಕಿಲ್ಲ ॥

ಘಟೋತ್ಕಚ: ಎನ್ನಯ ರಾಜ್ಯದಿ ನಿನ್ನಯ ಅಂಕೆಯೆ ।
ಕುನ್ನಿಯ ತೆರದಲಿ ಮಾತಾಡು ।
ನಿನ್ನಯ ಬಿಂಕಕೆ ತಾವಿದು ಸಲ್ಲದು ।
ಚಿಣ್ಣನೆ ಮಣಿಯದೆ ಹೋಗಗೊಡೆ ॥

ರಾಗ – ಪಂಚಾಗತಿ – ರೂಪಕತಾಳ

ನರನ ಕುವರ ಗರ್ವದಿಂದ ದುರುಳ ದೈತ್ಯನ ।
ಜರೆಯಲಾತ ಭರದಿ ಘೋರ್ಗರೆವುತಾಕ್ಷಣ ॥
(ಯುದ್ಧ – ಅಭಿಮನ್ಯು ಸೋಲು, ಸುಭದ್ರೆ ದುಃಖ)

ರಾಗ – ಆನಂದಭೈರವಿ – ರೂಪಕತಾಳ

ಸುಭದ್ರೆ: ಏತಕೆ ಮಲಗಿದೆ ಕಂದನೆ ।
ಮಾತುಗಳಾಡದೆ ಸುಮ್ಮನೆ ।
ಈ ತೆರದಿಂ ಬಿಮ್ಮನೆ ಮಮ ಜಾತನೆ ಜಡನಾಗಿ ॥
ಭೀತಿಗಳೇಕೀ ದಾನವ ।
ನೇತರದೊಡ್ಡಿತು ತಿಳಿಯೈ ।
ಭೂತಳದೊಳು ಪರಿಕಿಸಲೀ ಕೋತಿಯು ನಿನಗಿದಿರೇ ॥
[ಹಿಡಿಂಬೆ ಪ್ರವೇಶ]

ರಾಗ – ಮಧ್ಯಮಾವತಿ – ಅಷ್ಟತಾಳ

ಹಿಡಿಂಬೆ: ಯಾರವ್ವ । ತಾಯೆ । ಯಾರವ್ವ ।
ಸುರರೊ ಮಾನವರೊ ಸಂಗರಶೂರನೀತ ।
ಧುರದೊಳೆಮ್ಮೊಡನೆ ಸೆಣಸೆ ಬಂದ ಖ್ಯಾತ ।
ಬರುವುದೇಕಿಲ್ಲಿಗೆ ಬಳಿಕ್ಯಾಕೀ ಶೋಕ ॥
ಮರೆಯದೆ ಉಸಿರು ಇದೇನ್ ಕರ್ಮ ವಿಪಾಕ ॥

ರಾಗ – ಶಂಕರಾಭರಣ – ತ್ರಿಪುಟತಾಳ

ಸುಭದ್ರೆ : ನಂಬಲಾರೆನು ಕೇಳು ದಾನವ ।
ರೆಂಬವರು ಕಪಟಿಗಳು ಮತ್ತೀ ।
ಕುಂಭಿನಿಯೊಳದನೇನ ಪೇಳಲಿ ಇಂಬುಗಾಣೇ ॥

ರಾಗ – ಮೋಹನ – ಏಕತಾಳ

ಹಿಡಿಂಬೆ : ದೇವರ ಸಾಕ್ಷಿ ನಂಬಿಕೊಳ್ಳೈ ಇನ್ನು ।
ಧಾವತಿ ಪಡದೆ ಕೇಳ್ ತರಳೆ ॥
ಯಾವ್ಯಾವ ಕಾಲಕ್ಕೆ ಏನೇನಾಹುದೊ ।
ಭೂವಲಯದಿ ತಿಳಿದವರಾರು ॥
ಕೊಟ್ಟೆನು ಭಾಷೆಯ ಬಿಟ್ಟೆನು ವೈರವ ।
ತುಟ್ಟತುದಿಯು ಆ ಶಿವನಾಣೆ ॥
ಶ್ರೇಷ್ಠಳೆ ನೀ ಬಂದಿಷ್ಟವನರುಹಲು ।
ಕಷ್ಟವ ಹರಿಸುವೆ ಕರುಣದಲೀ ॥

ರಾಗ – ಅಠಾಣ – ಝಂಪೆತಾಳ

ಸುಭದ್ರೆ : ಖಳರಾಯ ಕೇಳಯ್ಯ ಕಲಿ ಪಾರ್ಥನರಸಿ ನಾ ।
ನಳಿನಾಕ್ಷನನುಜೆ ಮಾಂಗಲ್ಯವತಿಯು ॥
ಹೊರಟಿರಲು ದ್ವಾರಕಿಗೆ ತರಳನಭಿಮನ್ಯು ಜತೆ ।
ತರುಬಿ ತಡೆದರು ನಿಮ್ಮ ಚಾರಕರು ನಮ್ಮ ॥
ಯಾರು ಎಣಿಸದ ಸಾವು ಸಾರಿ ಬಂದಿತು ಇವಗೆ ।
ಯಾರಿನ್ನು ಕಾಯುವರು ಯಾರಿಂದ ಪಾರು ॥

ರಾಗ – ಭೈರವಿ – ಝಂಪೆತಾಳ

ಹಿಡಿಂಬೆ : ವಿಧಿಯೆ ತಂದಿತು ನಿಮ್ಮ ಅದು ಎಮ್ಮ ಒಳಿತಿಗೆ ।
ಪದುಮನಾಭನ ದಯವು ಇರಲು ಭಯವೇನು ॥

ಕೇಳೆನ್ನ ಕುವರನೇ ಈಕೆ ಎನ್ನಯ ತಂಗಿ ।
ಬೀಳಿಸಿದ ಸುಕುಮಾರ ಇವ ನಿನಗೆ ತಮ್ಮ ॥

ಘಟೋತ್ಕಚ : ಬೀಳಿಸಿದ ಸುಕುಮಾರ ಇವನೆನಗೆ ತಮ್ಮ!

ಹಿಡಿಂಬೆ : ಅಹುದಹುದು ತಾಳ್ತಾಳು ಮೊದಲು ಚೇತರಿಸಿವನ ॥
(ಘಟೋತ್ಕಚನು ಅಭಿಮನ್ಯುವನ್ನು ಎಚ್ಚರಿಸುವನು)

ರಾಗ – ಮೋಹನ – ಅಷ್ಟತಾಳ

ಸುಭದ್ರೆ : ಏನು ಅಚ್ಚರಿ ಇದುವು ಯಾರವ್ವ ನೀ ಪೇಳು ।
ಕಾನನದೊಳಗಿರುವ ದಾನವಿಯೇ ॥

ಹಿಡಿಂಬೆ : ನಾನು ದಾನವಿ ನಿಜವು ಮಾನಿನಿ ಕೇಳೆನ್ನ ।
ಮಾನವ ಪತಿದೇವನಿಹ ಭೀಮಸೇನ ॥

ಸುಭದ್ರೆ : ಭೀಮಸೇನನ ಸುತನೆ ಈ ನಿನ್ನ ಕುವರ ।
ಕಾಮನಯ್ಯನ ಕೃಪೆಯು ಏನು ವಿಚಿತ್ರ ।
ಕಲಿ ಘಟೋತ್ಕಚನೀತ ನಲಿವ ಹಿಡಿಂಬೆಯು ।
ಒಲಿದ ಬೊಮ್ಮನ ದಯದಿ ಉಳಿದೆವಾವಿಂದು ॥

ಘಟೋತ್ಕಚ : ಏನು ಕಜ್ಜವು ಪೇಳು ಚಿಕ್ಕಮ್ಮ ತವಕದಿ ।
ನಿನ್ನ ಸಂದೇಶವು ಎನಗುಪದೇಶ ॥

ಸುಭದ್ರೆ : ನಮ್ಮುಭಯರ ನೀನು ದ್ವಾರಕ ನಗರಿಗೆ ।
ನೆಮ್ಮದಿಯಿಂದೊಯ್ಯೆ ಸಂಮಾನವಾಯ್ತು ॥
(ಎಲ್ಲರೂ ಕೂಡಿ ಕೃಷ್ಣನಲ್ಲಿ ಬರುತ್ತಾರೆ)

ರಾಗ – ಮಧ್ಯಮಾವತಿ – ಆದಿತಾಳ

ಸುಭದ್ರೆ : ದೇವರದೇವ ಬಿನ್ನಪ ಲಾಲಿಸಯ್ಯ ।
ಸಾವಧಾನದಿ ಎನ್ನ ನೋವಿನ ಕಥೆಯ ॥
ನಿನ್ನಗ್ರಜನು ತಾನು ತನ್ನಯ ಸುತೆಯ ॥
ಮನ್ನಿಸಿ ಈವನು ಕುರುಭೂಪಸುತಗೆ ॥

ನಾಳಿನ ಷಷ್ಠಿಗೆ ಲಗ್ನದ ಗಳಿಗೇ ।
ಕಾಳುಯೋಗವ ಹರಿಸೆ ಉಳಿಗಾಲವೆನಗೆ ॥

ಕೃಷ್ಣ : ಏಕೆ ಚಿಂತಿಪೆ ತಂಗಿ ಸೌಭದ್ರೆ ನೀನು ।
ನಾಕ ನರಕವ ಗೈವ ಈ ಶೂರನಿಹನು ॥

ರಾಗ – ಕಲ್ಯಾಣಿ – ಭಾಮಿನಿ

ಕೃಷ್ಣ : ಎಲವೆಲವೊ ದೈತ್ಯೇಶ ಕೇಳೈ ।
ಹಲವು ಮಾತಿಂದೇನು ಲಗ್ನದ ।
ಬೆಳಗು ಬರುವುದರೊಳಗೆ ಕೌರವಬಲವನನಿಶುವನು ॥
ಚಳಕದಿಂದಲಿ ಮಾಯವೆಸಗುತೆ ।
ನಿಲಿಸು ದಿಬ್ಬಣ ಬಂದ ತೆರದಲಿ ।
ನಲಿವಿನಿಂ ಪೊರಡಯ್ಯ ವಿಪಿನದಿ ಎಚ್ಚರದೊಳೆಂದ ॥

ರಾಗ – ಮಾರವಿ – ಏಕತಾಳ

ಘಟೋತ್ಕಚ : ಸ್ವಾಮಿಯೆ ನಿನ್ನೀ ಕಾರ್ಯವನೆಸಗುವೆ
ನಿನ್ನಯ ದಯೆಯಿಂದ ।
ನೇಮಿಸಿದೆಲ್ಲಾ ಮಾಟವ ಮಾಳ್ಪೆನು ।
ಸೋಜಿಗ ಕಾಣ್ ಅಂದ ॥
ಕೌರವರಾಯನ ದಿಬ್ಬಣವನ್ನೆ ।
ಮಾಯದಿ ನಿಲಿಸುವೆನು ॥
ಶೂರ ನಿಮ್ಮಣ್ಣನ ನಿಜಸುತೆಯನ್ನೆ ।
ಜಾರಿಸಿ ಅಡಗಿಪೆನು ॥

ಕೃಷ್ಣ : ಯಾರಿಂದಾಗದ ಕೆಲಸವಿದೆಲ್ಲವ ।
ಮಾಡುವ ನೀ ಮಹಿಮ ।
ಬೇರೊಂದನು ನೀ ಯೋಚಿಸಬೇಡವು
ನೋಡೀ ಪಥ ಸುಗಮ ॥

(ಘಟೋಟ್ಕಚನು ಮಾಯಾದಿಬ್ಬಣವನ್ನು ಸೃಷ್ಟಿಸುವನು)

ರಾಗ – ರೇಗುಪ್ತಿ – ವಾರ್ಧಕ್ಯ

ಧಾರಿಣೀಪತಿ ಕೇಳು ಕೌರವಾದ್ಯಖಿಲ ಸುಕು ।
ಮಾರ ಕರ್ಣ ದ್ರೋಣ ಭೀಷ್ಮ ಮುಖ್ಯರ ಸಹಿತ ।
ಭೂರಿಸೇನಾದ್ಯಮಿತ ನಾರಿಯರ ನಿವಹಮಂ
ಮಾಯೆಯಲಿ ಸೃಷ್ಟಿಸಿದನು ॥
(ಮಾಯಾದಿಬ್ಬಣ ದೃಶ್ಯ. ಬಲರಾಮನು ಕೃಷ್ಣನಲ್ಲಿ ಬಂದು)

ರಾಗ – ಬಿಲಹರಿ – ಆದಿತಾಳ

ಬಲರಾಮ : ಸಾಗಿ ಬಂದಿಹೆ ಗೋವಿಂದ ಕೇಳು ।
ಬೇಗನೆ ಕಾದಿದೆ ಸಂಭ್ರಮ ತಾಳು ॥
ಈಗಲೆ ಬಂದಿಹ ಕೌರವಭೂಪ । ರಾಗದಿ ದಿಬ್ಬಣ ಮದುಮಗ [ಸಹಿತ ।
ಮೋದದೊಳೀವೆನು ಎನ್ನಯ ಸುತೆಯ ।
ಮೇದಿನಿಪತಿ ಕುರುರಾಯನ ಸುತಗೇ ॥
ನಾಳಿನ ಸೃಷ್ಟಿಗೆ ಲಗ್ನದ ಗಳಿಗೆ ।
ಕಾದಿದೆ ದಿಬ್ಬಣ ಬಾ ನನ್ನ ಜೊತೆಗೆ ॥

ರಾಗ – ಆರ್ಯ – ಏಕತಾಳ

ಕೃಷ್ಣ : ಇದೇನ್ ವಿಚಿತ್ರದ ಕಾರ್ಯವನೆಸಗುವೆ ।
ಬೋಧನೆ ಯಾರದು ನಿನಗಣ್ಣ ।
ಸೋದರಿಯಾಸೆಯ ಹಿಂಗಿಪ ನಡತೆಯು ।
ಯಾದವಕುಲಕಿದು ಹಿತವಲ್ಲ ॥
ಮೇದಿನಿಪತಿಯನು ನೀನೇ ಮನ್ನಿಸು ।
ಆದರಿಸಲು ನಾ ಬರಲೊಲ್ಲೆ ॥
ಬಲರಾಮ : ಬಾರದೆಹೋದರೆ ಬೆದರುವನಲ್ಲ ।
ಸಾರಿದ ಲಗ್ನವ ಬಿಡಲಾರೆ ।

ಯಾರಿಂದಾಗಲಿ ಏನೇ ಬಂದರು ।
ತೀರಿಪೆ ಬಯಕೆಯ ಇದ ನಂಬು ॥

(ಇಬ್ಬರೂ ನಿರ್ಗಮನ)

(ಘಟೋತ್ಕಚನ ಮಾಯೆ)

ರಾಗ – ಸಾವೇರಿ – ವಾರ್ಧಕ್ಯ

ಕನ್ನೆ ಕನಕಾಂಗಿಯನು ಕಲಿಘಟೋತ್ಕಚನಂದು ।
ಹೊನ್ನಮಂಚದೊಳವಳು ಮಲಗಿರಲು ತಾನೆತ್ತಿ ।
ತನ್ನ ಮಾಯಾಬಲದಿ ಸಾಗಿಸಿದನಾಕ್ಷಣಕೆ ।
ಧರ್ಮಜನ ನೆಲೆಗಾಗಳು ॥

(ಮಾಯಾದಿಬ್ಬಣ ಬರುವಿಕೆ. ಬಲರಾಮನ ಸ್ವಾಗತ, ಮಾಯಾಲಗ್ನ)

(ದಿಬ್ಬಣ ಮರಳುವಿಕೆ)

(ಇತ್ತ ನಿಜಕೌರವನ ದಿಬ್ಬಣ)

ರಾಗ – ಘಂಟಾರವ – ತ್ರಿಪುಟತಾಳ

ಬಂದನಾಗ ಕೌರವ ಬಂದನಾಗ ॥
ಬಂದನಾ ಧೃತರಾಷ್ಟ್ರಭೂಪನ । ನಂದನನು ನಲವಿಂದ ತನ್ನಯ ।
ಕಂದ ಲಕ್ಷಣಸಹಿತ ಸೇನಾವೃಂದದೊಡನೇ ।
ಚಂದದಿಂ ದ್ವಾರಾವತಿಗೆ ತಾ । ಮುಂದಿವಾರ್ಬಲ ಮದು ಮಗನ ಜತೆ ।
ದಂ ದಣಂ ದಣರೆಂಬ ಭೇರಿಯು ಸಂದಣಿಸಿ ಮೊಳಗುತ್ತಲಾಗಲೆ ।
ಬಂದನಾಗ ॥

(ನಿಜಕೌರವನ ದಿಬ್ಬಣವನ್ನು ನೋಡಿ ಅಕ್ರೂರನು, ಕೃಷ್ಣ ಬಲರಾಮರೆಡೆಗೆ ಬಂದು ವಿಚಾರ ತಿಳಿಸುತ್ತಾನೆ)

ರಾಗ – ಸಾರಂಗ – ಅಷ್ಟತಾಳ

ಅಕ್ರೂರ : ಯಾದವಾಗ್ರಣಿಯೆ ನೀನು ।
ಲಾಲಿಸು ವಿ । ನೋದದ ಸುದ್ದಿಯನು ।
ಕಾದಿದೆ ಕೌರವರಾಯನ ದಿಬ್ಬಣ ।
ವೈದಿ ಹೊರಗೆ ತಾಂ ಹಾದಿಯ ಕಾಯುತ್ತ ॥
ತರಳ ಲಕ್ಷಣನಿಗಿನ್ನು । ನಿನ್ನಯ ಕು ।
ವರಿ ಕನಕಾಂಗಿಯನ್ನು ॥
ಪರಿಪರಿ ವಿಭವದಿ ದಶಮಿ ಮುಹೂರ್ತಕೆ ।
ಧಾರೆಯೆರೆಸಿಕೊಂಬರೆ । ಬಂದನು ದೊರೆ ॥

ರಾಗ – ಹಂಸಧ್ವನಿ – ಅಷ್ಟತಾಳ

ಬಲರಾಮ : ಏನಯ್ಯ । ಕೃಷ್ಣ । ಏನಯ್ಯ ॥ ನ ।
ವೀನವಾಗಿದೆ ವಾರ್ತೆಯನುಭವವಿದು ಮತ್ತೆ ।
ಮೊದಲು ಕೌರವರೆಂದು ಬಂದೆನ್ನ ಮಗಳ ।
ಮದುವೆಯ ಮಾಡಿಕೊಂಡೊಯ್ದವರಾರು ॥
ಅದ್ಭುತ ಮಾಯಾವಿಚಿತ್ರವು ಗಾಢ । ಏನಯ್ಯ ॥

ರಾಗ – ಮಧ್ಯಮಾವತಿ – ಆದಿತಾಳ

ಕೃಷ್ಣ: ಯಾರು ಬಲ್ಲರು ಈ ವಿಚಾರದ ಮಹಿಮೆಯ ।
ಧಾರಿಣಿಯೊಳು ತ್ರಿಪುರಾರಿಯಲ್ಲದೆ ಬೇರೆ ।
ಅಣ್ಣ ನಿನಗೆ ಮೊದಲೆನ್ನ ಮಾತುಗಳೆಲ್ಲ ।
ಸಣ್ಣದಾಯಿತು ಈಗ ಎಣ್ಣಿಸಲೇನು ॥
ಸುರರೊ ದಾನವರೊ ನಿಜವಲ್ಲದವರು ॥
ಬರಿ ಬರಿ ಪರಿಹಾಸ ಗೈದು ತೆರಳಿಹರು ॥

ಬಲರಾಮ : ಬಿಡಲಾರೆ ನಾನಿದನ್ ಕಡುಮಾನಭಂಗವು ।
ಹೊಡೆದೋಡಿಸುವೆನೀಗ ಠಕ್ಕರ ತೌಳಿ ॥
(ಕರ್ಣ ಘಟೋತ್ಕಚರ ಯುದ್ಧ)
(ಬಲರಾಮ ಕೌರವರ ಯುದ್ಧ)
(ಇತ್ತ ಧರ್ಮರಾಜನ ಬಳಿಗೆ ಘಟೋತ್ಕಚನ ಬರುವಿಕೆ)

ರಾಗ – ನವರೋಜು – ಆದಿತಾಳ

ಧರ್ಮರಾಯ : ಬಂದೆಯ ನೀ ಚಂದದೊಳು । ಆ ।
ನಂದದಲಿ ಶೀಘ್ರದೊಳು ।
ಇಂದಿರೆರಮಣನು ನೇಮಿಸಿದಂದದಿ ।
ಬಂದಿಹ ತೊಡರನು ಹರಿಸಿದೆಯೇನೋ ॥
ಘಟೋತ್ಕಚ : ಹಿರಿಯಯ್ಯ ಲಾಲಿಪುದು । ಶ್ರೀ ॥
ಹರಿ ದಯದಿ । ಕಜ್ಜವದು ॥
ನೆರವೇರಿಸುತಲಿ ಐತಂದಿಹೆನು ।
ಜರಗಿಸು ಪಾರ್ಥನ ಕುವರಗೆ ಲಗ್ನವ ॥

ರಾಗ – ಭೈರವಿ – ಭಾಮಿನಿ

ಧರ್ಮರಾಯ : ಎಂದ ಕುವರನ ಮಾತ ಮೆಚ್ಚುತ ।
ಅಂದು ಧರ್ಮಜ ಪಾರ್ಥನನು ಕರೆ ।
ದೆಂದ ನೀ ಪೋಗುವುದು ಹರಿಯೆಡೆಗೀಗ ಭರದಿಂದ ॥
(ಅರ್ಜುನನು ಕೃಷ್ಣನಲ್ಲಿಗೆ ಬರುತ್ತಾನೆ)

ರಾಗ – ಕಾಂಬೋಧಿ – ಝಂಪೆತಾಳ

ಕೃಷ್ಣ : ಕ್ಷೇಮವೇ ಧರ್ಮಜನು ಪಾರ್ಥ ನಿನ್ನವರೆಲ್ಲ ।
ಕಾಮಿತವ ಬಲ್ಲೆ ನೀ ಅಳುಕಬೇಡ ।

ಭಾಮೆ ಸೌಭದ್ರೆಯುಳ ಮನದ ವಾಂಛಿತವದುವೆ ।
ನೇಮದಲಿ ಕೈಗೂಡೆ ತುಸುವೆ ಹೊತ್ತು ॥
ಬಾ ಪೋಪ ಅಣ್ಣನೆಡೆ ಉರಿದು ಬೀಳುವನವನು ।
ತಾನೊಂದು ಅರಿಯನವ ನಡೆದ ಹೊಂತ ।
ಈ ಪರಿಯು ಬವಣೆಯಲಿ ನೊಂದು ಬೆಂದಿಹನವನು ।
ತಾಪವಾರಿಸಬೇಕು ತಾಳ್ಮೆಯಿಂದ ॥

(ಕೃಷ್ಣಾರ್ಜುನರು ಜೊತೆಗೂಡಿ ಬಲರಾಮನಲ್ಲಿ ಬರುವರು)

ರಾಗ – ಶಂಕರಾಭರಣ – ತ್ರಿವುಡೆತಾಳ

ಅರ್ಜುನ : ಭಾವ ಲಾಲಿಸು ಎನ್ನ ಬಿನ್ನಪ ।
ಭಾವುಕನು ಎನ್ನಣ್ಣ ಧರ್ಮಜ ।
ಈ ಒಸಗೆ ತಿಳುಹಿದನು ತಾ ಸುವಿದಾಯದಿಂದ ॥
ನೀವು ಮನ್ನಿಸಿ ಎನ್ನ ಕಂದಗೆ ।
ಆವ ದೋಷವನೆಣಿಸದೆಲೆ ತಾ ।
ಈವುದೈ ಕನಕಾಂಗಿಯನು ಆ ದೈವವೊಲಿವಂತೆ ॥

ರಾಗ – ಕಲ್ಯಾಣಿ – ಝಂಪೆತಾಳ

ಬಲರಾಮ : ಏನೆಲವೊ ಪಾರ್ಥ ನೀನೇನಾಡಿದೆಯೊ ಈಗ ।
ಸಾನಂದದಿಂದ ಮಹಾನುತೋಷದಲಿ ॥
ಮಂದಮತಿಗಳು ಕಪಟದಿಂದೈದಿ ಮತ್ತೆನ್ನ ।
ನಂದನೆಯು ಕದ್ದೊಯ್ದ ಹಂದೆಗಳು ನೀವು ॥
ಬಂದಿಲ್ಲಿ ಯಾಚಿಪಿರಿ ಒಂದು ತಿಳಿಯದ ತೆರದಿ ।
ಮಂದಬುದ್ಧಿಯ ಹಿರಿಯ ನಾನಲ್ಲವಯ್ಯ ॥

ರಾಗ – ಸುರುಟಿ – ಏಕತಾಳ

ಕೃಷ್ಣ : ಯಾಕೀ ಪರಿಹಾಸ । ಅಗ್ರಜ ।
ಸಾಕೀ ಅಪಹಾಸ ॥
ವಿಧಿಲಿಖಿತಗಳನ್ನು । ಮೀರುವ । ಎದೆಗಾರರು ಯಾರು ॥
ಇದರೊಳಗೀಶ್ವರನಿಚ್ಛೆಯು ಇಹುದು ।
ಅದ ತಿಳಿಯದೆ ನೀ ಕೋಪಿಪೆ ಏಕೆ ॥
ದೂರುವೆ ಪಾಂಡವರ । ನಿನಗಾ । ಕೌರವರೇನಹರೋ ॥

ರಾಗ – ಹಂಸಧ್ವನಿ – ಭಾಮಿನಿ

ಬಲರಾಮ : ಸಾಕುಸಾಕೆಲೊ ಕೃಷ್ಣ ನಿನ್ನ ವಿ ।
ಕಾರದುರುಮಾಯೆಗಳನೆಲ್ಲವ ।
ಯಾರರಿಯರೆಲೆ ಲೋಕದಲಿ ಸಾರತ್ತ ಭರದಿಂದ ॥

[ನಾರದ ಪ್ರವೇಶ]

ರಾಗ – ಶಂಕರಾಭರಣ – ಅಷ್ಟತಾಳ

ನಾರದ : ಏನಯ್ಯ । ರಾಮ । ಏನಯ್ಯ ।
ಏನಯ್ಯ ಈ ಅವಮಾನದಚ್ಚರಿಗಳು ।
ಕಾಣಲೆಮಗೆ ನವೀನವಾಗಿಹುದು ॥
ಸಾಕು ಸೈರಿಸಯ್ಯ । ಅವಿ ।
ವೇಕದ ನಡತೆಯು ಜೀಯ ॥ ಮೂರು ।
ಲೋಕವು ಮೆಚ್ಚದಲ್ಲಯ್ಯಾ ॥
ಯಾರಯ್ಯ ಹೊಣೆ ಪಾಂಡವರಿಗೆ । ಅವ ।
ರ್ಯಾರು ಈ ಭ್ರಮೆ ಯಾಕೆ ನಿನಗೆ ॥ ಕೈ ।
ಮೀರಿಯೆ ಕುಂತಿಕುಮಾರರೊಳ್ ಸೆಣಸಲು ।
ತೋರುವ ನಿಮ್ಮವತಾರಗಳುಳಿವುದೆ । ಏನಯ್ಯ ॥

ರಾಗ – ದೇವಗಾಂಧಾರಿ – ಭಾಮಿನಿ

ಎಂದ ಋಷಿವರನುತ್ತರಕೆ ಮನ ।
ಬೆಂದು ಮುಸಲವನಿಳುಹಿ ಹದನೇ ।
ನೆಂದು ಬಳಿಕೀಕ್ಷಿಸಿದನಾ ಗೋವಿಂದನಾನನವ ॥
(ಮುಂದೆ ಅಭಿಮನ್ಯು-ಕನಕಾಂಗಿಯರ ಲಗ್ನ)

ಮಂಗಲಂ

ರಾಗ – ಧವಳಾರ – ಆದಿತಾಳ

ಬತ್ತಲೆ ನಿಂತಿಹ ಬುದ್ಧನಿಗೇ ।
ಉತ್ತಮ ಹಯವೇರಿದ ಕಲ್ಕ್ಯನಿಗೆ ॥
ಹತ್ತವತಾರದಿ ಭಕ್ತರ ಸಲಹುವ ।
ಅಚ್ಯುತ ಪುರಂದರವಿಠಲನಿಗೇ । ಮಂಗಲಂ ಜಯ ಮಂಗಲಂ ॥